# ಅನಂತಪಥ

ANANTHKUMAR PRATISHTHANA


ಅದಮ್ಯ ಚೇತನ ಆಗಸದೆತ್ತರಕೆ ಬೆಳೆಯಲಿ
ಪುಟ 6



ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿಯವರು

ಸಂಪುಟ - 3 ಜನವರಿ - 2023 ಸಂಚಿಕೆ - 31

# ಅದಮ್ಯ ಚೇತನದ ಮಾತೃಹೃದಯದ ಸೇವೆ

## ಅದಮ್ಯ ಚೇತನದ ಸೇವಾ ಉತ್ಸವದಲ್ಲಿ ಶ್ರೀ ಶ್ರೀ ಶ್ರೀ ವಿಶ್ವ ಪ್ರಸನ್ನತೀರ್ಥ ಸ್ವಾಮೀಜಿಯವರ ಅನುಗ್ರಹ ಭಾಷಣ

ಕೃಷ್ಣಂ ವಂದೇ ಮಂಥಪಾಶಧರಂ ದಿವ್ಯಾರ್ಭಕಾಕೃತಿಂ|
ಶಿಖಾಬಂಧತ್ರಯೋಪೇತಮ್ ಭೈಷ್ಮೀ ಮಧ್ವಕರಾರ್ಚಿತಮ್ ||




ಶ್ರೀಮತಿ ತೇಜಸ್ವಿನಿ ಅನಂತಕುಮಾರರು ನಡೆಸುತ್ತಿರುವ ಅದಮ್ಯ ಚೇತನದ ಈ ಅನಂತ ಸೇವಾ ಉತ್ಸವದಲ್ಲಿ ಪಾಲ್ಗೊಳ್ಳುವುದು ನಮಗೆ ಸಂತೋಷದ ವಿಚಾರ. ಅವರು ಅದಮ್ಯವಾದ ಉತ್ಸಾಹವನ್ನು ಹೊಂದಿದ್ದಾರೆ. ವಂದೇ ಮಾತರಂ ಹಾಡಿನಲ್ಲಿರುವ ಮಾತೃ ಹೃದಯ ಅವರಲ್ಲಿದೆ. ಇಡೀ ನಾಡಿನ ಎಲ್ಲ ಮಕ್ಕಳನ್ನು ತಮ್ಮ ಮಕ್ಕಳಂತೆ ಕಂಡು ಅವರ ನೋವು ನಲಿವುಗಳಲ್ಲಿ ಸಹಭಾಗಿಯಾಗಿ ಅವರ ಹಸಿವನ್ನು ಇಂಗಿಸುವ ಪವಿತ್ರವಾದ ಕಾರ್ಯದಲ್ಲಿ ಅವರು ನಿರತರಾಗಿದ್ದಾರೆ. ಹಸಿವಿನಿಂದ ಓದಿಗೆ ತೊಡಕಾಗಬಾರದು ಎನ್ನುವ ನೆಲೆಯಲ್ಲಿ ಅವರು ಅನ್ನದಾಸೋಹದ ದೊಡ್ಡ ಸೇವೆಯನ್ನು ಮಾಡುತ್ತಿದ್ದಾರೆ. ಅವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಸೇವೆ ಎನ್ನುವುದು ಒಂದು ಮಹತ್ಕಾರ್ಯ. ಸೇವೆ ಮುಂತಾದ ದೊಡ್ಡ ಶಬ್ದಗಳು, ದೊಡ್ಡ ಹುದ್ದೆಗಳು ಇಂದಿನ ಸಮಾಜದಲ್ಲಿ ಸ್ವಾರ್ಥಲಾಲಸೆಯ ಮಂದಿಯಿಂದಾಗಿ ಅಪವಿತ್ರಗೊಳ್ಳುತ್ತಿವೆ. "ನಿಮ್ಮ ಸೇವೆಗಾಗಿ ನಾವಿದ್ದೇವೆ" ಎಂದು ಹೇಳಿಕೊಳ್ಳುತ್ತ, ತಮ್ಮ ಸ್ವಾರ್ಥವನ್ನು ಈಡೇರಿಸಿಕೊಳ್ಳುತ್ತ, ತಮ್ಮ ಭಂಡಾರವನ್ನು ಬೆಳೆಸಿಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇಂತಹ ಸೇವೆ ಮಾಡುವವರಿಂದ ದೂರ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಿರುವಾಗ, ಸೇವೆ ಎಂಬ ಶಬ್ದಕ್ಕೆ ಮತ್ತೆ ಮೌಲ್ಯ ಬಂದದ್ದು, ಉಳಿದದ್ದು ಇಂತಹ ಅನಂತ ಸೇವಾ ಕಾರ್ಯದಿಂದಾಗಿ ಎಂದು ನಾವು ಭಾವಿಸುತ್ತೇವೆ.



ಶ್ರೀ ಅನಂತಕುಮಾರರ ಹೆಸರಲ್ಲಿ ಪ್ರಾರಂಭಿಸಿರುವ ಈ ಸೇವಾ ಕಾರ್ಯ ಅವರ ಹೆಸರನ್ನು ಅನ್ವರ್ಥವಾಗಿಸುವಂತೆ ಅನಂತವಾಗಿ ಮುಂದುವರೆಸಿಕೊಂಡು ಹೋಗುವ ಶಕ್ತಿಯನ್ನು ಆ ಕೃಷ್ಣ ಅನುಗ್ರಹಿಸಲಿ ಎಂದು ನಾವು ಪ್ರಾರ್ಥಿಸುತ್ತೇವೆ. ಈ ಸಂದರ್ಭದಲ್ಲಿ ಶ್ರೀಮದ್‌ಭಾಗವತದ ಒಂದು ಪ್ರಸಂಗ ನಮಗೆ ನೆನಪಾಗುತ್ತದೆ. ಒಮ್ಮೆ, ಗೋಪಬಾಲಕರೆಲ್ಲ ಬಂದು "ಕೃಷ್ಣ, ಹಸಿವೆಯಾಗುತ್ತಿದೆ, ನಮಗೆ ಊಟಕ್ಕೆ ವ್ಯವಸ್ಥೆ ಮಾಡು" ಎಂದು ಕೃಷ್ಣನಲ್ಲಿ ಕೇಳಿಕೊಂಡರಂತೆ. ಅದಕ್ಕೆ ಕೃಷ್ಣ, "ನೋಡಿ, ಅಲ್ಲಿ ಯಜ್ಞ ನಡೆಯುತ್ತಿದೆ, ಅಲ್ಲಿ ಹೋಗಿ ಕೇಳಿ" ಎಂದು ಹೇಳಿದ. ಅದನ್ನು ಕೇಳಿದ ಬಾಲಕರು ಅಲ್ಲಿಗೆ ಹೋಗಿ ಕೇಳಿದರು; ಬರಿಗೈಯಲ್ಲಿ ವಾಪಸ್ಸು ಬಂದರು. ಕೃಷ್ಣನ ಬಳಿ ತಮ್ಮ ನಿರಾಸೆಯನ್ನು ಅವರು ತೋಡಿಕೊಂಡಾಗ ಕೃಷ್ಣ, "ನೀವು ತಪ್ಪು ಸ್ಥಳಕ್ಕೆ ಹೋದಿರಿ, ಯಜ್ಞಶಾಲೆಯ ಹಿಂಭಾಗದಲ್ಲಿ ಮಾತೃಶಾಲೆ ಇದೆ, ಅಲ್ಲಿ ಹೋಗಿ ವಿಚಾರಿಸಿ" ಎಂದನಂತೆ. ಅದರಂತೆ ಅವರೆಲ್ಲ ಅಲ್ಲಿಗೆ ಹೋಗಿ, "ಕೃಷ್ಣ ಬಂದಿದ್ದಾನೆ, ಹಸಿದಿದ್ದಾನೆ, ಅವನಿಗೆ ಊಟ ಬೇಕಂತೆ" ಎಂದು ಹೇಳಿದರು. ಈ ಮಾತುಗಳನ್ನು ಕೇಳಿದ ಅಲ್ಲಿನ ಮಾತೆಯರೆಲ್ಲ ಯಜ್ಞಕ್ಕೋಸ್ಕರ ಸಿದ್ಧಪಡಿಸಿದ ಬಗೆಬಗೆಯ ದ್ರವ್ಯಗಳನ್ನೆಲ್ಲ ಹಿಡಿದುಕೊಂಡು ಓಡಿ ಬಂದರು, ಆ ಮಕ್ಕಳಿಗೆಲ್ಲ ಹಂಚಿ, ಕೃಷ್ಣನಿಗೂ ನೀಡಿ, ಎಲ್ಲರ ಹಸಿವನ್ನು ತಣಿಸಿದರು ಎಂಬ ಒಂದು ಕಥೆಯನ್ನು ನಾವು ಭಾಗವತದಲ್ಲಿ ಓದುತ್ತೇವೆ. ಭಾಗವತದ ಈ ಕಥೆ ಬರಿಯ ಕಥೆಯಲ್ಲ, ಇಂದಿಗೂ ಸಮಾಜದಲ್ಲಿ ನಡೆಯುತ್ತಿರುವ ಘಟನೆ ಎಂಬುದಕ್ಕೆ ಉದಾಹರಣೆಯಾಗಿ ತೇಜಸ್ವಿನಿ ಅನಂತಕುಮಾರರು ಲೋಕದ ಎಲ್ಲಾ ಮಕ್ಕಳಲ್ಲಿ ಆ ಕೃಷ್ಣನನ್ನು ಕಂಡು ಅವರ ಹಸಿವನ್ನು ತಣಿಸಲು ಮುಂದಾಗಿದ್ದಾರೆ. ಶ್ರೀಕೃಷ್ಣ ಅವರ ಜೊತೆಗೆ ನಿತ್ಯ ನಿರಂತರವಾಗಿ ನಿಂತು ಈ ಸೇವೆಯನ್ನು ಸ್ವೀಕರಿಸುತ್ತಿದ್ದಾನೆ.

ಭಗವಂತನು ಅವರು ಮಾಡುತ್ತಿರುವ ಈ ರೀತಿಯ ದೇಶ ಸೇವೆಗೆ ನಿರಂತರವಾಗಿ ಶಕ್ತಿ, ಭಕ್ತಿಯನ್ನು ತುಂಬಲಿ ಎಂದು ಆಶಿಸುತ್ತ ಮತ್ತೊಮ್ಮೆ ಅವರನ್ನು, ಅವರ ಜೊತೆ ಕೈಜೋಡಿಸಿರುವ ಎಲ್ಲರನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಶ್ರೀ ಕೃಷ್ಣಾರ್ಪಣಮಸ್ತು




## ಸೇವಾ ಉತ್ಸವಕ್ಕೆ ಶ್ರೀ ಅಮಿತ್ ಷಾ ಭೇಟಿ



ಅದಮ್ಯ ಚೇತನವು 31 ಡಿಸೆಂಬರ್, 2022 ಹಾಗೂ 1ಜನವರಿ 2023ರಂದು ಹಮ್ಮಿಕೊಂಡಿದ್ದ ಅನಂತ ಸೇವಾ ಉತ್ಸವದಲ್ಲಿ ಕೇಂದ್ರ ಗೃಹಸಚಿವರಾದ ಶ್ರೀ ಅಮಿತ್ ಷಾ ರವರು ಪಾಲ್ಗೊಂಡಿದ್ದುದು ಈ ವರ್ಷದ ಸಮಾರಂಭದ ವಿಶೇಷ.

ಬೆಂಗಳೂರಿಗೆ ಆಗಮಿಸಿದ್ದ ಕೇಂದ್ರಸಚಿವರು ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆಯೂ ಅದಮ್ಯಚೇತನವನ್ನು ವೀಕ್ಷಿಸಲು ಸಮಾಯಾವಕಾಶಮಾಡಿಕೊಂಡು ಬಂದುದು, ಶ್ರೀ ಅಮಿತ್ ಷಾರವರಿಗೆ ತಮ್ಮ ಸಹವರ್ತಿ ಶ್ರೀ ಅನಂತಕುಮಾರರ ಬಗೆಗಿದ್ದ ಆದರಾಭಿಮಾನಗಳಿಗೆ ದ್ಯೋತಕವಾಗಿದೆ. ಅದಮ್ಯಚೇತನದ ಅನ್ನಪೂರ್ಣ ಅಡುಗೆಮನೆಯನ್ನು ವೀಕ್ಷಿಸಿದ ಷಾರವರು ಪ್ರತಿನಿತ್ಯ ಸಾವಿರಾರು ಮಕ್ಕಳಿಗೆ ಶುಚಿರುಚಿಯಾದ ಬಿಸಿಯೂಟ ಪೂರೈಸುವ ತ್ಯಾಜ್ಯರಹಿತ ವ್ಯವಸ್ಥೆಯ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಅಲ್ಲಿಂದ, ಅದಮ್ಯ ಸೇವಾ ಉತ್ಸವವು ಏರ್ಪಟ್ಟಿದ್ದ ಧೋಂಡೂಸಾ ಕಲ್ಯಾಣ ಮಂಟಪಕ್ಕೆ ಆಗಮಿಸಿದ ಶ್ರೀ ಅಮಿತ್ ಷಾರವರು ಆವರಣದಲ್ಲಿದ್ದ ಪುರಾತನ ದೇಗುಲಗಳ ಛಾಯಾಚಿತ್ರ ಪ್ರದರ್ಶನ ಮೊದಲಾದ ವಿವಿಧ ಪ್ರದರ್ಶಿನಿಗಳನ್ನು ವೀಕ್ಷಿಸಿದರು. ಅನಂತರ ಸಮಾರಂಭದಲ್ಲೂ ಪಾಲ್ಗೊಂಡರು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಕೇಂದ್ರ ಸಚಿವರನ್ನು ಉತ್ಸವ ಸಮಾರಂಭಕ್ಕೆ ಸ್ವಾಗತಿಸಿದರು. ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ.ವಿ. ಕೃಷ್ಣಭಟ್ ಮತ್ತು ಅದಮ್ಯ ಚೇತನದ ಟ್ರಸ್ಟಿ ಶ್ರೀ ನಂದಕುಮಾರ್ ಗಣ್ಯರನ್ನು ಸನ್ಮಾನಿಸಿದರು. ರಾಜ್ಯ ಬಿಜೆಪಿ ಅಧ್ಯಕ್ಷ ಶ್ರೀ ನಳಿನ್ ಕುಮಾರ್ ಕಟೀಲ್, ಬಿಜೆಪಿ ರಾಷ್ಟ್ರ ಕಾರ್ಯದರ್ಶಿ ಶ್ರೀ ಸಿ.ಟಿ. ರವಿ, ಕರ್ನಾಟಕ ಸರ್ಕಾರದ ಸಚಿವರಾದ ಶ್ರೀ ಆರಗ ಜ್ಞಾನೇಂದ್ರ, ಆರ್. ಅಶೋಕ್, ಸೋಮಶೇಖರ್ ಮೊದಲಾದವರು ಸಭೆಯಲ್ಲಿ ಉಪಸ್ಥಿತರಿದ್ದರು.

# ಪರಂಪರೆಯ ಪ್ರತೀಕ - ಅನಂತ ಸೇವಾ ಉತ್ಸವ


















ಅದಮ್ಯ ಚೇತನ ಸಂಸ್ಥೆಯು ಭಾರತೀಯ ಪರಂಪರೆಗನುಗುಣವಾಗಿ ಹೊಸ ವರ್ಷವನ್ನು ಸ್ವಾಗತಿಸುವ ಕಾರ್ಯಕ್ರಮವನ್ನು ವಿನೂತನವಾಗಿ ಮತ್ತು ಸಂಭ್ರಮೋತ್ಸಾಹಗಳೊಂದಿಗೆ ಅದಮ್ಯ ಸೇವಾ ಉತ್ಸವವಾಗಿ ಆಚರಿಸಿಕೊಂಡು ಬರುತ್ತಿದೆ. ಭಾರತದ ಸ್ವಾತಂತ್ರ್ಯದ ಅಮೃತಮಹೋತ್ಸವದ ಸಂದರ್ಭದಲ್ಲಿ ಈ ಬಾರಿಯ ಉತ್ಸವವನ್ನು ಅನಂತ ಸೇವಾ ಉತ್ಸವವನ್ನಾಗಿ 31/12/2022 ಮತ್ತು 01/01/2023ರಂದು ಗವಿಪುರದ ಮಗಜಿ ಧೋಂಡೂಸಾ ಸಭಾಂಗಣದಲ್ಲಿ ಸಂಭ್ರಮದಿಂದ ನಡೆಸಲಾಯಿತು.

31/12/2022ರ ಬೆಳಿಗ್ಗೆ ಹತ್ತು ಗಂಟೆಗೆ ಸಭಾಂಗಣದ ಹೊರಾಂಗಣದಲ್ಲಿ ಏರ್ಪಡಿಸಿದ್ದ 75 ಸ್ವಾತಂತ್ರ್ಯವೀರರ ಛಾಯಾಚಿತ್ರ ಮತ್ತು ವಿಡಿಯೋ ಪ್ರದರ್ಶನ; 75 ದೇವಾಲಯಗಳ ಛಾಯಾಚಿತ್ರ ಪ್ರದರ್ಶನ ಮತ್ತು 75 ಔಷಧೀಯ ಸಸ್ಯಗಳ ಪ್ರದರ್ಶಿನಿಗಳನ್ನು ಗಣ್ಯರು ಉದ್ಘಾಟಿಸಿದ ನಂತರ ವೇದಿಕೆಯ ಕಾರ್ಯಕ್ರಮ ಪ್ರಾರಂಭವಾಯಿತು. ಪ್ರಾರ್ಥನೆ ಮತ್ತು ದೀಪ ಬೆಳಗುವ ಮೂಲಕ ವಿಧ್ಯುಕ್ತವಾಗಿ ಚಾಲನೆ ಪಡೆದುಕೊಂಡ ವೇದಿಕೆಯ ಕಾರ್ಯಕ್ರಮಗಳಲ್ಲಿ ತಮ್ಮ ದಿವ್ಯ ಸಾನ್ನಿಧ್ಯದ ಮೂಲಕ ಭಾಗವಹಿಸಿದ ಬೇಲಿಮಠದ ಶ್ರೀ ಶಿವರುದ್ರ ಮಹಾಸ್ವಾಮೀಜಿ, ಶ್ರೀಗೋಸಾಯಿ ಮಹಾಸಂಸ್ಥಾನ ಮಠದ ಶ್ರೀ ಶ್ರೀ ಶ್ರೀ ಮಂಜುನಾಥ ಭಾರತೀ ಮಹಾಸ್ವಾಮಿಗಳು ಮತ್ತು ಗವಿ ಗಂಗಾಧರೇಶ್ವರ ದೇವಾಲಯದ ಪ್ರಧಾನ ಅರ್ಚಕರಾದ ಶ್ರೀ ಸೋಮಸುಂದರ ದೀಕ್ಷಿತರು ಆಶೀರ್ವಚನ ನೀಡಿದರು. ವೇದಿಕೆಯಲ್ಲಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ, ಪ್ರೊ|| ಪಿ ವಿ ಕೃಷ್ಣಭಟ್, ಪ್ರಯೋಗ ಸಂಸ್ಥೆಯ ಸ್ಥಾಪಕ ಶ್ರೀ ಎಚ್. ಎಸ್. ನಾಗರಾಜ್, ಅನಂತಪಥ ಪತ್ರಿಕೆಯ ಸಂಪಾದಕ ಶ್ರೀ ಟಿ. ಎಸ್. ಗೋಪಾಲ್, ಅದಮ್ಯಚೇತನದ ಟ್ರಸ್ಟಿಗಳಾದ ಶ್ರೀ ಎಚ್. ಎನ್. ನಂದಕುಮಾರ್, ಶ್ರೀ ಪ್ರದೀಪ್ ಓಕ್ ಉಪಸ್ಥಿತರಿದ್ದರು.

ದಿನದ ಮತ್ತೋರ್ವ ಮುಖ್ಯ ಅತಿಥಿ, ಪದ್ಮಶ್ರೀ ಸಾಲುಮರದ ತಿಮ್ಮಕ್ಕ, ಅದಮ್ಯ ಚೇತನದ ಸಸ್ಯಾಗ್ರಹದಲ್ಲಿ ಪಾಲ್ಗೊಂಡು ಕಾರ್ಯಕ್ರಮಕ್ಕೆ ಹುರುಪು ತುಂಬಿದರು. ನಂತರ ನಡೆದ ವೇದಿಕೆಯ ಕಾರ್ಯಕ್ರಮದಲ್ಲಿ ಅವರನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಶ್ರೀಮತಿ ಪ್ರತಿಭಾ ಓಕ್ ಸನ್ಮಾನಿಸಿದರು.

ವೇದಿಕೆಯ ಕಾರ್ಯಕ್ರಮಗಳನ್ನು ಅನುಸರಿಸಿ ವಿವಿಧ ಸ್ಪರ್ಧೆಗಳು ಮತ್ತು ಮನರಂಜನಾ ಕಾರ್ಯಕ್ರಮಗಳು ಆಯೋಜಿತವಾಗಿದ್ದವು.

ಸಂಜೆ 5 ಗಂಟೆಗೆ ಕೇಂದ್ರ ಗೃಹಮಂತ್ರಿ, ಶ್ರೀ ಅಮಿತ್ ಶಾ ಆಗಮಿಸಿ ಅದಮ್ಯ ಚೇತನದ ಶೂನ್ಯ ತ್ಯಾಜ್ಯ ಅಡುಗೆ ಮನೆ ವೀಕ್ಷಿಸಿ ಅದಮ್ಯ ಚೇತನದ ಚಟುವಟಿಕೆಗಳನ್ನು ಶ್ಲಾಘಿಸಿದರು. ನಂತರ ಸುಮಾರು ಒಂದು ಗಂಟೆಯ ಕಾಲ ಪ್ರೊ. ಕೃಷ್ಣೇಗೌಡರಿಂದ ಹಾಸ್ಯರಸಧಾರೆ ಹರಿದ "ಹಾಸ್ಯ ಸಂಜೆ" ಕಾರ್ಯಕ್ರಮ, ತದನಂತರ, ಶ್ರೀ ಆನೂರು ಅನಂತಕೃಷ್ಣ ಶರ್ಮ, ಶ್ರೀ ಯಶಸ್ವಿ ಮತ್ತು ಸಂಗಡಿಗರಿಂದ ತಾಳವಾದ್ಯ ಕಾರ್ಯಕ್ರಮಗಳು ಎಲ್ಲರನ್ನೂ ರಂಜಿಸಿದವು. ರಾತ್ರಿ 8:30ಕ್ಕೆ ಶ್ರೀ ಕೃಷ್ಣ ಸಂಪಗಾಂವ್ಕರ್, "ಬಾರೂಡ" ಎಂಬ ವಿಶೇಷ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ದಿನದ ಕೊನೆಯ ವಿಶೇಷ ಕಾರ್ಯಕ್ರಮವಾಗಿ "ಮಾರುತಿ ಪ್ರತಾಪ" ಎಂಬ ಪ್ರಸಂಗವನ್ನು (ಪುಟ 10 ರಲ್ಲಿ ಮುಂದುವರೆದಿದೆ)


















# ಬೈದವರಿಂದ ಪ್ರಮಾಣಪತ್ರ!

1860ರ ದಶಕ. ಸೂರ್ಯನಾರಾಯಣ ಎಂಬ ಹುಡುಗ ತನ್ನ ತರಗತಿಯ ಕೊನೆಯ ಬೆಂಚಿನಲ್ಲಿ ಕುಳಿತು ಎದುರಿಗೆ ನಿಂತಿದ್ದ ಬ್ರಿಟಿಷ್ ಅಧಿಕಾರಿಯನ್ನೇ ದಿಟ್ಟಿಸಿ ನೋಡುತ್ತಿದ್ದ. ಆ ಅಧಿಕಾರಿ ಶಾಲೆಗಳ ವೀಕ್ಷಣೆಗೆಂದು ಸರ್ಕಾರದಿಂದ ನಿಯುಕ್ತನಾಗಿ ಈ ಶಾಲೆಗೆ ಬಂದಿದ್ದ ಲೂಯಿಸ್ ರೈಸ್.

ಶಾಲಾ ಇನ್ಸ್‌ಪೆಕ್ಟರ್ ಕೇಳುವ ಪ್ರಶ್ನೆಗಳಿಗೆ ಚುರುಕಾಗಿ ಸರಿಯಾಗಿ ಉತ್ತರಿಸುವ ಬುದ್ಧಿವಂತನಿಗೆ ಅಧಿಕಾರಿ ಬಹುಮಾನ ಕೊಡುವ ರೂಢಿಯಿತ್ತು. ಸೂರ್ಯ ನಾರಾಯಣನ ಬಗೆಗೆ ಅಸೂಯೆಯಿದ್ದ ಶಿಕ್ಷಕರು ಆತನನ್ನು ಉದ್ದೇಶಪೂರ್ವಕ ಕೊನೆಯಲ್ಲಿ ಕೂರಿಸಿದ್ದರು. ಆದರೆ, ತಾನು ಕೇಳಿದ ಪ್ರಶ್ನೆಗಳಿಗೆಲ್ಲ ಸರಿಯುತ್ತರ ಹೇಳಿದ ಸೂರ್ಯನಾರಾಯಣ ರೈಸ್ ಮಹಾಶಯನ ಗಮನ ಸೆಳೆದುಕೊಂಡ; ಬಹುಮಾನವನ್ನೂ ಗಿಟ್ಟಿಸಿಕೊಂಡ.

ಸೂರ್ಯನಾರಾಯಣ ಬೆಂಗಳೂರಿನ ಸೆಂಟ್ರಲ್ ಹೈಸ್ಕೂಲಿನಲ್ಲಿ (ಆಗ ಅದನ್ನು ಲಂಡನ್ ಮಿಶನ್ ಸ್ಕೂಲ್ ಎಂದು ಕರೆಯುತ್ತಿದ್ದರಂತೆ) ಓದುತ್ತಿದ್ದಾಗ ನಡೆದ ಒಂದು ಘಟನೆ ಹೀಗಿದೆ: ರೆವರೆಂಡ್ ವಾಲ್ಟನ್ ಎಂಬ ಪಾದ್ರಿ ಸೂರ್ಯ ನಾರಾಯಣ ಓದುತ್ತಿದ್ದ ತರಗತಿಗೆ ಪಾಠ ಹೇಳಲು ಬಂದಿದ್ದರಂತೆ. ಹನುಮಂತ ಸಮುದ್ರ ದಾಟಿ ರಾಕ್ಷಸರನ್ನು ಮಣಿಸಿದ ಕಥೆಯನ್ನು ಅಪಹಾಸ್ಯ ಮಾಡಿ ನಕ್ಕು ಇದನ್ನೆಲ್ಲ ನಂಬಲು ನಾವು ಮೂರ್ಖರಿರಬೇಕು ಎಂದರಂತೆ. ಎಲ್ಲ ಮಕ್ಕಳೂ ಮೌನವಾಗಿದ್ದರು. ಸೂರ್ಯನಾರಾಯಣನಿಗೆ ಸಹಿಸಲಾಗಲಿಲ್ಲ. ಎದ್ದು ನಿಂತು ''ಏಸುವು ಕೆರಳಿದ ಸಾಗರವನ್ನು ದಿವ್ಯಶಕ್ತಿಯಿಂದ ಸಂತೈಸಿದ ಹಾಗೆಯೇ ಹನುಮಂತನೂ ತನ್ನ ದಿವ್ಯಶಕ್ತಿಯಿಂದ ಸಮುದ್ರವನ್ನು ದಾಟಬಲ್ಲವನಾಗಿದ್ದಾನೆ. ಏಸು ನಾಲ್ಕಾರು ಬ್ರೆಡ್ ತುಣುಕುಗಳನ್ನು ಸಾವಿರಾರು ಜನರಿಗೆ ಹಂಚಬಲ್ಲವನಾದರೆ ಹನುಮಂತನೂ ತನ್ನ ಬಾಲ ಬೀಸಿ ಲಂಕೆಯ ರಕ್ಕಸರನ್ನು ಮಣಿಸಿರುವುದರಲ್ಲಿ ಅಚ್ಚರಿಯೇನಿದೆ?'' ಎಂದು ವಾದಿಸಿದ. ಪಾದ್ರಿಗೆ ಸಿಟ್ಟು ನೆತ್ತಿಗೇರಿತು. ಕೂಡಲೇ ತರಗತಿಯಿಂದ ಹೊರಹೋಗುವಂತೆ ಆದೇಶಿಸಿದರು.

ಸೂರ್ಯನಾರಾಯಣ ಈ ಶಾಲೆಯನ್ನೇ ತೊರೆದು ಬೇರೊಂದು ಶಾಲೆಗೆ ಸೇರಲು ನಿರ್ಧರಿಸಿದ. ಆದರೆ ಆ ಇನ್ನೊಂದು ಶಾಲೆಯ ಮುಖ್ಯಸ್ಥರು ರೆವರೆಂಡ್ ವಾಲ್ಟನ್‌ರವರಿಂದ ನಡತೆಯ ಪ್ರಮಾಣಪತ್ರ ತರಬೇಕೆಂದು ಸೂಚಿಸಿದರು.

ಸೂರ್ಯನಾರಾಯಣ ನೇರವಾಗಿ ವಾಲ್ಟನ್‌ರವರಲ್ಲಿಗೆ ಹೋಗಿ ತನಗೆ ನಡತೆಯ ಪ್ರಮಾಣಪತ್ರ ನೀಡುವಂತೆ ಕೇಳಿದ. ಪಾದ್ರಿಯವರಿಗೆ ಹಿಂದಿನ ದಿನದ ಸಿಟ್ಟು ಇನ್ನೂ ಕಡಿಮೆಯಾಗಿರಲಿಲ್ಲ. ಅದರ ಜೊತೆಗೆ ಯಾವ ಅಳುಕೂ ಇಲ್ಲದವನಂತೆ ಸೂರ್ಯನಾರಾಯಣ ಬಂದು ನಿಂತ ರೀತಿಯನ್ನು ನೋಡಿ ಅಸಹನೆ ಹೆಚ್ಚಿತು.

'ನಾನು ಕೊಡಬಹುದಾದ ಸರ್ಟಿಫಿಕೇಟ್ ನಿನಗೆ ಹೇಗೆ ಪ್ರಯೋಜನಕ್ಕೆ ಬಂದೀತು?' ಎಂದವರು ಪ್ರಶ್ನಿಸಿದರು. ಸೂರ್ಯನಾರಾಯಣ ಧೃತಿಗೆಡದೆ ಉತ್ತರಿಸಿದ: ''ಪ್ರಮಾಣಪತ್ರ ಎನ್ನುವುದು ಸತ್ಯವನ್ನು ಹೇಳುತ್ತದೆಯೆಂದು ಎಲ್ಲರ ನಿರೀಕ್ಷೆ. ನಾನು ಒಬ್ಬ ವಿದ್ಯಾರ್ಥಿ. ನನ್ನ ನಡೆನುಡಿ, ವರ್ತನೆ ಎಲ್ಲವೂ ನನ್ನ ಶಿಕ್ಷಕರ ಸ್ವಭಾವಕ್ಕೆ ಅನುಗುಣವಾಗಿ ರೂಪುಗೊಂಡಿರುತ್ತವೆ. ಯಾವುದೇ ವಿದ್ಯಾರ್ಥಿಯ ಪ್ರಮಾಣಪತ್ರದಲ್ಲಿ ಅವಿಧೇಯತೆಯನ್ನೋ ಉದ್ಧಟತನವನ್ನೋ ನಮೂದಿಸಿದಲ್ಲಿ ಅದು ಆ ವಿದ್ಯಾರ್ಥಿಯು ಒಬ್ಬ ಒಳ್ಳೆಯ ಹುಡುಗನ ಹಾಗೆ, ತನ್ನ ಶಿಕ್ಷಕರ ಗುಣವನ್ನೇ ಯಥಾವತ್ತಾಗಿ ಅನುಸರಿಸಿದ್ದಾನೆ ಎಂಬುದನ್ನು ತೋರಿಸುತ್ತದೆ.'' ವಾಲ್ಟನ್‌ರವರಿಗೆ ಸೂರ್ಯನಾರಾಯಣನ ಜಾಣ್ಮೆಯ ಉತ್ತರ ತುಂಬ ಇಷ್ಟವಾಯಿತು. ''ನೀನು ನಮ್ಮ ಶಾಲೆಯನ್ನು ಬಿಟ್ಟು ಹೋಗಬೇಡ. ನೀನು ಮೆಟ್ರಿಕ್ಯುಲೇಶನ್ ತೇರ್ಗಡೆ ಹೊಂದಿ ಹೋಗುವವರೆಗೆ ಪ್ರತಿ ತಿಂಗಳೂ ನಾನು ನಿನಗೆ ಐದು ರೂಪಾಯಿ ವಿದ್ಯಾರ್ಥಿ ವೇತನವನ್ನೂ ಕೊಡುತ್ತೇನೆ'' ಎಂದು ಹೇಳಿ ಬೆನ್ನುತಟ್ಟಿ ಕಳಿಸಿದರು.

ಮುಂದೆ ತನ್ನ ಪದವಿ ಓದಿ ಮುಗಿಸುವ ಹೊತ್ತಿಗೆ ಸೂರ್ಯನಾರಾಯಣ ರಾಯರಿಗೆ ಅಧ್ಯಾಪಕನ ಹುದ್ದೆ ಮಂಜೂರು ಮಾಡಿದ್ದೂ, ಆ ವೇಳೆಗೆ ಇಲಾಖೆಯ ಮುಖ್ಯಸ್ಥನಾಗಿ ನೇಮಕಗೊಂಡಿದ್ದ ಲೂಯಿಸ್ ರೈಸ್ ಎಂಬ ಅಧಿಕಾರಿಯೇ.

ರಾಬರ್ಟ್ ಸಿವೆಲ್ ಎಂಬ ಬ್ರಿಟಿಷ್ ಅಧಿಕಾರಿಯೊಬ್ಬ ವಿಜಯನಗರವನ್ನು ಕುರಿತು ದಿ ಫರ್ಗಾಟನ್ ಎಂಪೈರ್ ಆಫ್ ವಿಜಯನಗರ್ ಎಂಬ ಪುಸ್ತಕವೊಂದನ್ನು ಬರೆದಿದ್ದ. ಈ ಪುಸ್ತಕದಲ್ಲಿ ಮಾಹಿತಿಗಳನ್ನು ತಪ್ಪಾಗಿ ವಿವರಿಸಿದ್ದುದನ್ನು ಕಂಡು ಕ್ರುದ್ಧರಾದ ಸೂರ್ಯನಾರಾಯಣ ರಾವ್ ಮುಂದೆ ಆನೆಗೊಂದಿಯ ಮಹಾರಾಜರ ಪ್ರೇರಣೆಯಿಂದ ''ಮರೆಯಲಾಗದ ಮಹಾ ಸಾಮ್ರಾಜ್ಯ (ನೆವರ್ ಟು ಬೀ ಫರ್ಗಾಟನ್ ಎಂಪೈರ್) ವಿಜಯನಗರ'' ಎಂಬ ಗ್ರಂಥವನ್ನು ಬರೆದು ಇತಿಹಾಸಕ್ಕೆ ಆದ 'ಅಪಚಾರ'ವನ್ನು ತಿದ್ದುವ ಪ್ರಯತ್ನ ಮಾಡಿದರು. ಸೂರ್ಯನಾರಾಯಣರಾಯರು ಒರಿಸ್ಸಾದಲ್ಲೂ ಮದರಾಸ್ ಸಂಸ್ಥಾನದಲ್ಲೂ ಕೆಲಕಾಲ ದಿವಾನರಾಗಿಯೂ ಕೆಲಸ ಮಾಡಿದರು. ಮುಖ್ಯವಾಗಿ, ತಮ್ಮ ಪೂರ್ವಿಕರನ್ನನುಸರಿಸಿ ಜ್ಯೋತಿಷ ಶಾಸ್ತ್ರದಲ್ಲಿ ಅಪಾರ ಪಾಂಡಿತ್ಯವನ್ನು ಸ್ವಪ್ರಯತ್ನದಿಂದ ಗಳಿಸಿಕೊಂಡ ಸೂರ್ಯನಾರಾಯಣರಾಯರು ದೇಶಾದ್ಯಂತ ಸಂಚರಿಸಿ ವಿವಿಧ ಸಂಸ್ಥಾನಗಳಲ್ಲಿ ತಮ್ಮ ವಿದ್ವತ್ತಿನ ಪರಿಚಯಮಾಡಿಕೊಟ್ಟರು. ಅವರು 1895ರಲ್ಲಿ ಮೊದಲಿಗೆ ಸಂಪಾದಿಸಿ ಪ್ರಕಟಿಸಿದ ದಿ ಆಸ್ಟ್ರಲಾಜಿಕಲ್ ಮ್ಯಾಗಜೈನ್ ಪತ್ರಿಕೆಯನ್ನು ಮುಂದೆ ಅವರ ಮೊಮ್ಮಗ ಡಾ. ಬಿ.ವಿ. ರಾಮನ್ ಅವರು ಮುಂದುವರಿಸಿ ಪ್ರಕಟಿಸತೊಡಗಿದರು. (ಇದೀಗ ರಾಮನ್ ಅವರ ಮಗಳು ಶ್ರೀಮತಿ ಗಾಯತ್ರೀದೇವಿ ವಾಸುದೇವ್ ಅವರು ಸಂಪಾದಕರಾಗಿ ಮುನ್ನಡೆಸುತ್ತಿದ್ದಾರೆ.)

## ಅನಂತಯಾನ ಅಧ್ಯಾಯ- 7

ನಿರೂಪಣೆ : ಟಿ.ಎಸ್. ಗೋಪಾಲ್

# ಕನ್ನಡನಾಡುನುಡಿಗಳ ಬಗೆಗೆ ಅನಂತನಿಷ್ಠೆ

-ಗುಡ್ಡು ಇನಾಂದಾರ್




ಅನಂತಪಥ ಪತ್ರಿಕೆಯ ಪ್ರತಿಯೊಂದು ಸಂಚಿಕೆಯಲ್ಲಿಯೂ ಅನೇಕರು ಅನಂತಕುಮಾರರ ಬಗ್ಗೆ ಬೇರೆಬೇರೆ ಆಯಾಮಗಳಲ್ಲಿ ಬರೆದಿರುವ ಲೇಖನಗಳಿವೆ. ಅನಂತಕುಮಾರರನ್ನು ಬಣ್ಣಿಸಲು ಹೋದರೆ, ಕುರುಡರು ಆನೆಯೊಂದನ್ನು ಬಣ್ಣಿಸಿದ ಸ್ಥಿತಿ ನಮ್ಮದಾಗುತ್ತದೆ. ಇಂತಹ ಸ್ಥಿತಿಯಲ್ಲಿ ಅನಂತಕುಮಾರರನ್ನು ಕುರಿತ ನನ್ನ ಕೆಲವು ನೆನಪುಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ.

1975ರ ಜೂನ್ 25ರಂದು ಅಂದಿನ ಪ್ರಧಾನಿ, ಶ್ರೀಮತಿ ಇಂದಿರಾಗಾಂಧಿಯವರು ಭಾರತದಲ್ಲಿ ತುರ್ತು ಪರಿಸ್ಥಿತಿ ಜಾರಿಗೆ ತಂದರು. ಇವತ್ತು ನಾವು ನೋಡುತ್ತಿರುವ ಅಪ್ಪಟ ಸ್ವತಂತ್ರ ವಾತಾವರಣಕ್ಕೆ ಅಂದಿನ ವಾತಾವರಣ ತದ್ವಿರುದ್ಧವಾಗಿತ್ತು. ಎಲ್ಲೆಂದರಲ್ಲಿ ಕುಳಿತು ಸರಕಾರದ ವಿರುದ್ಧ ಮಾತನಾಡುವಂತಿರಲಿಲ್ಲ. ಯಾರನ್ನೂ ಟೀಕಿಸುವ ಹಾಗಿಲ್ಲ. ಲೇಖನಗಳನ್ನು ಬರೆಯಲೂ ಅವಕಾಶವಿರಲಿಲ್ಲ. ತಪ್ಪಿದರೆ ಸೆರೆವಾಸ ಕಟ್ಟಿಟ್ಟ ಬುತ್ತಿ ಎಂಬಂಥ ಸ್ಥಿತಿ. ಅಂದಿನ ವಿರೋಧಪಕ್ಷಗಳ ಎಲ್ಲ ನಾಯಕರನ್ನು ಮಧ್ಯರಾತ್ರಿಯೇ ಬಂಧಿಸಿ ಸೆರೆವಾಸಕ್ಕೆ ಕಳುಹಿಸಲಾಯಿತು. ಇವತ್ತಿನ ಯುವಕರು ಊಹಿಸಿಕೊಳ್ಳಲೂ ಸಾಧ್ಯವಿಲ್ಲದಂತಹ ಪರಿಸ್ಥಿತಿ. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ರಾಷ್ಟ್ರೀಯ ಸ್ವಯಂ ಸೇವಕ ಸಂಘವು "ಲೋಕ ಸಂಘರ್ಷ ಸಮಿತಿ" ಸಂಸ್ಥೆಯನ್ನು ಸ್ಥಾಪಿಸಿ, ಅದರ ಆಶ್ರಯದಲ್ಲಿ ನಾಗರಿಕ ಹಕ್ಕುಗಳನ್ನು ಹತ್ತಿಕ್ಕುವ ತುರ್ತುಪರಿಸ್ಥಿತಿಯ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ಶುರುಮಾಡಿತು. ಈ ಸಂದರ್ಭದಲ್ಲಿ ನಾನು ಮತ್ತು ಅನಂತಕುಮಾರರು ಒಟ್ಟಿಗೇ ಬಂಧನಕ್ಕೊಳಗಾದೆವು, ಅಂದಿನಿಂದಲೇ ನಮ್ಮ ಸ್ನೇಹ ಶುರುವಾಯಿತು.

1977ರಲ್ಲಿ ತುರ್ತು ಪರಿಸ್ಥಿತಿ ಕೊನೆಗೊಂಡ ನಂತರ, ನಾವಿಬ್ಬರೂ ಜೊತೆಗಾರರಾಗಿ ವಿದ್ಯಾರ್ಥಿ ಪರಿಷತ್ತಿನ ಕೆಲಸಗಳಲ್ಲಿ ತೊಡಗಿಕೊಂಡೆವು. ಅನಂತಕುಮಾರರ ಗಮನ ಯಾವಾಗಲೂ ದೊಡ್ಡ ವಿಚಾರಗಳ ಮೇಲೆಯೇ ಹರಿಯುತ್ತಿತ್ತು. ದೇಶದ ಬಗ್ಗೆ ಅವರ ನಿಷ್ಠೆ ಅಚಲವಾಗಿತ್ತು. ಅವರು ಭಾರತೀಯ ಜನತಾ ಪಕ್ಷ ಸೇರಿದಾಗ ಪಕ್ಷದಿಂದ ಕೇವಲ ಒಬ್ಬರು ಎಂಎಲ್‌ಎಯಾಗಿ ಚುನಾಯಿತರಾಗಿದ್ದರು. ಹಾಗಿದ್ದರೂ ಪಕ್ಷವನ್ನು ರಾಜ್ಯ ಹಾಗೂ ಕೇಂದ್ರಗಳಲ್ಲಿ ಅಧಿಕಾರದ ಹೊಸ್ತಿಲಿಗೆ ಕೊಂಡೊಯ್ಯುವ ಆತ್ಮವಿಶ್ವಾಸ ಅವರಲ್ಲಿತ್ತು.

ಭಾರತದ, ಕರ್ನಾಟಕದ ಬಗ್ಗೆ ಅವರಲ್ಲಿ ಅನೇಕ ಕನಸುಗಳಿದ್ದವು. ಸುಮಾರು ೩೫ ವರ್ಷಗಳ ಹಿಂದೆ ಜಮಖಂಡಿಯಲ್ಲಿ ಒಂದು ಸಮಾವೇಶ ನಡೆಯುತ್ತಿತ್ತು. ಆ ಸಮಾವೇಶಕ್ಕೆ ನಾನು ಮತ್ತು ಅನಂತಕುಮಾರ್ ಹೊರಟಿದ್ದೆವು. ಆ ಸಂದರ್ಭದಲ್ಲಿಯೇ "ನಾವು ದೇಶಕ್ಕಾಗಿ ಹೆಚ್ಚೇನೂ ಮಾಡಬೇಕಿಲ್ಲ. ನಮ್ಮ ದೇಶದ ರೈತರಿಗೆ ನೀರು, ವಿದ್ಯುತ್- ಈ ಎರಡು ಕೊಟ್ಟರೆ ಸಾಕು, ಮುಂದಿನದನ್ನು ಅವರೇ ಮಾಡಿಕೊಳ್ಳುತ್ತಾರೆ. ಅಷ್ಟು ಮಾಡಲೂ ನಮಗೆ ಇದುವರೆಗೆ ಸಾಧ್ಯವಾಗಿಲ್ಲವೆಂಬುದು ಬಹಳ ದುಃಖದ ಸಂಗತಿ. ನಾನೇನಾದರೂ ಅಧಿಕಾರಕ್ಕೆ ಬಂದರೆ ಮೊದಲು ಈ ಕೆಲಸ ಮಾಡಬೇಕು" ಎಂದು ಹೇಳಿದ್ದರು. ಇಂದು ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಅದರ ಕನಸನ್ನು ಅವರು ೧೯೯೮ರಲ್ಲಿಯೇ ಕಂಡಿದ್ದರು. ಅವರು ನಾಗರಿಕ ವಿಮಾನಯಾನ ಖಾತೆಯ ಸಚಿವರಾಗಿದ್ದಾಗ ಮಾನ್ಯ ಜೆ.ಎಚ್.ಪಟೇಲ್ ಅವರ ಜೊತೆ ಭಾರತದ ಮೊಟ್ಟಮೊದಲ ಖಾಸಗಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸಹಿ ಹಾಕಿದ್ದರು. ಅದೇ ರೀತಿ ಸುವರ್ಣ ಚತುಷ್ಪಥ ಯೋಜನೆ, ಬೆಂಗಳೂರು ಮೆಟ್ರೋ, ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹೆಚ್ಚು ಮಾಡಿದ್ದು, ಜನೌಷಧಿ ಮಳಿಗೆಗಳ ಪ್ರಾರಂಭ, ಅದಮ್ಯ ಚೇತನ ಸಂಸ್ಥೆಯ ಮೂಲಕ ಸುಮಾರು 2 ಲಕ್ಷ ಮಕ್ಕಳಿಗೆ ಅನ್ನದಾಸೋಹ, ಇವೆಲ್ಲವೂ ಅನಂತಕುಮಾರರ ಕನಸಿನ ಫಲಗಳು. ಯಾವುದೂ ಸಣ್ಣ ಕನಸಲ್ಲ.



ನಾವು ಅನಂತಕುಮಾರರನ್ನು ರಾಜಕಾರಣಿ ಎಂದು ಕರೆಯುವುದು ಸಾಧ್ಯವಿಲ್ಲ. ರಾಜಕಾರಣಿಗಳು ಮುಂದಿನ ಚುನಾವಣೆಯ ಬಗ್ಗೆ ಮಾತ್ರ ಆಲೋಚನೆ ಮಾಡುತ್ತಾರೆ. ರಾಜನೀತಿಜ್ಞರು ಮುಂದಿನ ಕೆಲವು ದಶಕಗಳು, ಪೀಳಿಗೆಗಳ ಬಗ್ಗೆ ಯೋಚನೆ ಮಾಡುತ್ತಾರೆ. ಮುಂದೆ ಏನಾಗುತ್ತದೆ ಎಂದು ಯೋಚಿಸಿ ಹೆಜ್ಜೆ ಹಾಕುವಂತಹ ವಿಶೇಷ ದೂರದರ್ಶಿ ಸ್ವಭಾವ ಅನಂತಕುಮಾರರಲ್ಲಿತ್ತು. ಬೆಂಗಳೂರು ಸಬರ್ಬನ್ ರೈಲು ಯೋಜನೆಯ ಬಗ್ಗೆ 2004ರಲ್ಲೇ ಮಾತನಾಡುತ್ತಿದ್ದರು. ಅವರ ಕಲ್ಪನೆಯಂತೆಯೇ ಈ ಯೋಜನೆ ಇದೀಗ ಅನುಷ್ಠಾನಕ್ಕೆ ಬರುತ್ತಿದೆ. ನಗರಾಭಿವೃದ್ಧಿ, ಸಂಸ್ಕೃತಿ, ವಿಮಾನಯಾನ, ಯುವಜನ ಸೇವೆ, ರಸಗೊಬ್ಬರ, ಪ್ರವಾಸೋದ್ಯಮ ಮುಂತಾದ ಒಂಬತ್ತು ಖಾತೆಗಳನ್ನು ಅವರು ಯಶಸ್ವಿಯಾಗಿ ನಿಭಾಯಿಸಿದರು. ಅವರ ಅಪಾರ ಅನುಭವದ ಪ್ರಯೋಜನವನ್ನು ಭಾರತ ಮತ್ತು ಕರ್ನಾಟಕ ಸದಾ ಪಡೆದುಕೊಂಡಿದೆ. ಕರ್ನಾಟಕದ ನೆಲ, ಜಲ, ಭಾಷೆಯ ವಿಷಯದಲ್ಲಿ ಅತ್ಯಂತ ಸ್ಪಷ್ಟವಾದ ನಿಲುವು ಹೊಂದಿದ್ದರು. ವಿಶ್ವಸಂಸ್ಥೆಯಲ್ಲಿ ಮಾಡಿದ ಭಾಷಣವಿರಬಹುದು, ಕಾವೇರಿ ಸಮಸ್ಯೆ ಇರಬಹುದು, ಯಾವುದನ್ನು ನೋಡಿದರೂ ಅನಂತಕುಮಾರರನ್ನು ಒಂದು ಚೌಕಟ್ಟಿನಲ್ಲಿ ಹಿಡಿದಿಡುವುದು ಅಸಾಧ್ಯ.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವಿದ್ದಾಗ ಶ್ರೀ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದರು. ಕಾವೇರಿ ಸಮಸ್ಯೆ ಉಲ್ಬಣಗೊಂಡಿತ್ತು. ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಕೇಂದ್ರದಲ್ಲಿ ವಾಜಪೇಯಿ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದರು. ಕತ್ತಿಯ ಅಲಗಿನ ಮೇಲಿನ ನಡಿಗೆಯಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಅನಂತಕುಮಾರ್, ತಮ್ಮ ಚತುರತೆಯಿಂದ ಸಮಸ್ಯೆಯನ್ನು ಬಗೆಹರಿಸಿದರು. ಆಗ ಎಸ್. ಎಂ. ಕೃಷ್ಣ ಅವರು ಅನಂತಕುಮಾರರನ್ನು ಅವರ ಮನೆಯಲ್ಲಿಯೇ ಸನ್ಮಾನ ಮಾಡಿ "ಕರ್ನಾಟಕದ ಆಪತ್ಬಾಂಧವ" ಎಂದು ಹೊಗಳಿದ್ದರು. ಆಗಲೂ ಅವರು ತಮ್ಮ ಕಾರ್ಯಕರ್ತರ ಹಿತವನ್ನೇ ಯೋಚಿಸಿ, ಕಾರ್ಯಕರ್ತರ ಮೇಲಿದ್ದ ನೂರಾರು ಮೊಕದ್ದಮೆಗಳನ್ನು ಹಿಂದೆಗೆದುಕೊಳ್ಳುವಂತೆ ಮುಖ್ಯಮಂತ್ರಿಗಳ ಮನವೊಲಿಸಿದ್ದರು. ಆಗ ಮೊಕದ್ದಮೆಗಳನ್ನು ಎದುರಿಸುತ್ತಿದ್ದ ನಮ್ಮ ಕಾರ್ಯಕರ್ತರ ಪಟ್ಟಿಯನ್ನು ತಯಾರಿಸಿ ಅವರ ಗಮನಕ್ಕೆ ತಂದೆ. ಆದರೆ ಆ ಪಟ್ಟಿಯಲ್ಲಿ ತಮ್ಮ ಹೆಸರನ್ನೂ ಗಮನಿಸಿದ ಅನಂತಕುಮಾರ್, ಪಟ್ಟಿಯಿಂದ ತಮ್ಮ ಹೆಸರನ್ನು ಕೈಬಿಟ್ಟು ಹೊಸಪಟ್ಟಿ ತಯಾರಿಸುವಂತೆ ನನಗೆ ಹೇಳಿದರು. ಇದು ಅವಕಾಶವನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳದಿರುವ ಅವರ ದೊಡ್ಡಗುಣ.

ರಾಜಸ್ಥಾನದ ಜೋಧಪುರದಲ್ಲಿ ಅದಮ್ಯ ಚೇತನದ ಕೇಂದ್ರ ಪ್ರಾರಂಭಿಸಬೇಕು ಎಂದು ನಿರ್ಧಾರ ಮಾಡಿ ಬೆಂಗಳೂರಿನಲ್ಲಿ ಒಂದು ಸಭೆ ಕರೆಯಲಾಗಿತ್ತು. ನಾವು ಸುಮಾರು 70000 ಮಕ್ಕಳಿಗೆ ಊಟ ನೀಡುವ ಯೋಜನೆ ಹಾಕಿದ್ದೆವು. ಅದನ್ನು ತಿಳಿದ ಮಹನೀಯರೊಬ್ಬರು ತಾವು 70 ಲಕ್ಷ ರೂಪಾಯಿ ದೇಣಿಗೆ ನೀಡುವುದಾಗಿ ಘೋಷಣೆ ಮಾಡಿದ್ದರು. ಆದರೆ ಅನಂತಕುಮಾರ್ ಅದನ್ನು ಒಪ್ಪಿಕೊಳ್ಳಲಿಲ್ಲ. ಒಂದು ಸಾಮಾನ್ಯ ಸಂಸ್ಥೆಯಾದ ಅದಮ್ಯ ಚೇತನವು ಒಬ್ಬರಿಂದಲೇ ಇಷ್ಟು ದೊಡ್ಡ ಮೊತ್ತ ತೆಗೆದುಕೊಳ್ಳುವುದು ಒಳ್ಳೆಯದಲ್ಲ. ಇದರ ಉದ್ದೇಶಗಳಿಗೆ ಹತ್ತು ಜನ ಕೈ ಜೋಡಿಸಬೇಕು, ಅಗತ್ಯ ಬಿದ್ದರೆ ನಾವೇ ನಿಮ್ಮ ಹತ್ತಿರ ಬರುತ್ತೇವೆ ಎಂದು ಅವರ ಪ್ರಸ್ತಾಪವನ್ನು ನಯವಾಗಿ ನಿರಾಕರಿಸಿದ್ದರು.

ಅನಂತಕುಮಾರರ ಜೊತೆಗಿನ ನನ್ನ ಹಲವು ದಶಕಗಳ ಸಂಬಂಧದಲ್ಲಿ ಇಂತಹ ಹಲವಾರು ಘಟನೆಗಳು ನಡೆದಿವೆ. ಅನಂತಕುಮಾರರಿಗೆ ಅನಂತಕುಮಾರರೊಬ್ಬರೇ ಹೋಲಿಕೆ ಎಂದಷ್ಟೇ ನಾನು ಹೇಳಬಲ್ಲೆ.

### ತೇಜಸ್ವಿನಿ ಅನಂತಕುಮಾರರಿಗೆ ಬಸವಾತ್ಮಜೆ ಪ್ರಶಸ್ತಿ

ಬಾಗಲಕೋಟೆಯ ಕೂಡಲ ಸಂಗಮದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಜನವರಿ 12ರಿಂದ 14ರ ವರೆಗೆ ನಡೆದ 36ನೇ ಶರಣ ಸಮ್ಮೇಳನದಲ್ಲಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರರಿಗೆ ಈ ವರ್ಷದ "ಬಸವಾತ್ಮಜೆ" ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪ್ರಶಸ್ತಿ ಪ್ರದಾನ ವೇದಿಕೆಯಲ್ಲಿ ಮಾತೆ ಗಂಗಾಂಬಿಕೆ, ಮಾಜಿ ಉಪಮುಖ್ಯಮಂತ್ರಿ ಶ್ರೀ ಈಶ್ವರಪ್ಪ ಮುಂತಾದವರು ಇದ್ದರು.

ಬಸವ ಧರ್ಮಪೀಠವು ಮಾತೆ ಮಹಾದೇವಿಯವರ ಸ್ಮರಣಾರ್ಥ ನೀಡುವ ಈ ಪ್ರಶಸ್ತಿ 51000 ರೂಪಾಯಿಗಳನ್ನು ಒಳಗೊಂಡಿದೆ. ಸಮಸ್ತ ಅದಮ್ಯ ಚೇತನ ಪರಿವಾರ ಶ್ರೀಮತಿ ತೇಜಸ್ವಿನಿಯವರನ್ನು ಅಭಿನಂದಿಸುತ್ತದೆ.









**ಪುಸ್ತಕ ಪರಿಚಯ**

# ಭಾರತದ ಆಗಸದಲ್ಲೊಂದು ರವಿತೇಜ

## -ತೇಜಸ್ ಯುದ್ಧ ವಿಮಾನ ಅಭಿವೃದ್ಧಿಯ ಯಶೋಗಾಥೆ




ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಕುರಿತ ಪುಸ್ತಕಗಳು ತುಂಬ ವಿರಳ. ರಕ್ಷಣಾ ತಂತ್ರಜ್ಞಾನದ ಕುರಿತ ಪುಸ್ತಕಗಳಂತೂ ಇಲ್ಲವೇ ಇಲ್ಲ. ಈ ಹಿನ್ನೆಲೆಯಲ್ಲಿ 31.12.2022ರಂದು ಭಾರತದ ಗೃಹಮಂತ್ರಿ ಶ್ರೀ ಅಮಿತ್ ಶಾ ಲೋಕಾರ್ಪಣೆ ಮಾಡಿದ "ಭಾರತದ ಆಗಸದಲ್ಲೊಂದು ರವಿತೇಜ – ತೇಜಸ್ ಯುದ್ಧ ವಿಮಾನ ಅಭಿವೃದ್ಧಿಯ ಯಶೋಗಾಥೆ" ಹಲವು ಪ್ರಥಮಗಳನ್ನು ಸೃಷ್ಟಿಸಿದೆ.

ಈ ಪುಸ್ತಕದ ಮೂಲ ಲೇಖಕರು ಕನ್ನಡಿಗರೇ ಆದ ಏರ್‌ಮಾರ್ಷಲ್ ಪಿ. ರಾಜ್‌ಕುಮಾರ್. ದಾವಣಗೆರೆಯವರಾದ ಶ್ರೀಯುತರು ದಶಕಗಳ ಕಾಲ ಈ ಯೋಜನೆಯ ಭಾಗವಾಗಿದ್ದವರು. ಹೀಗಾಗಿ, ಈ ಪುಸ್ತಕಕ್ಕೆ ಒಂದು ರೀತಿಯ ಅಧಿಕೃತತೆ (Authenticity) ಒದಗಿದೆ. ಇದು ಈಗ ಕನ್ನಡಕ್ಕೆ ಅನುವಾದಿತವಾಗಿ ಓದುಗರ ಕೈಸೇರಿದೆ.

ತಂತ್ರಜ್ಞಾನದ ಪುಸ್ತಕಗಳನ್ನು ಸ್ಥಳೀಯ ಭಾಷೆಗಳಲ್ಲಿ ಬರೆಯುವುದು ಕಷ್ಟ. ಅದರಲ್ಲಿಯೂ ಯುದ್ಧವಿಮಾನದ ನಿರ್ಮಾಣದ ಕಥೆಯನ್ನು ಕನ್ನಡಕ್ಕೆ ಅನುವಾದಿಸುವುದು ಬಹಳ ಕಷ್ಟ. ಇಂತಹ ಸಾಹಸಕ್ಕೆ ಕೈಹಾಕಿ ಯಶಸ್ವಿಯಾದವರು, ಶ್ರೀ ಎಂ. ಎಸ್. ನಾಡ್ಗೀರ್, ಡಾ|| ಎಂ. ವಿಜಯ ಕುಮಾರ್ ಮತ್ತು ಶ್ರೀ ಎಚ್. ಆರ್. ಪ್ರಕಾಶ್. ಶ್ರೀ ಡಿ. ಆರ್. ಸುಬ್ರಮಣ್ಯಂ ಈ ಯೋಜನೆಯ ಸಂಚಾಲಕರು. ಭಾರತೀಯ ಭಾಷೆಗಳಲ್ಲೇ ಇದು ಪ್ರಥಮ ಪ್ರಯತ್ನ, ಆದುದರಿಂದ ಈ ಪುಸ್ತಕಕ್ಕಾಗಿ ಇಡೀ ತಂಡಕ್ಕೆ ಕನ್ನಡನಾಡು ಋಣಿಯಾಗಿದೆ.

1969ರಲ್ಲಿ ಪ್ರಾರಂಭವಾದ ಲಘು ಯುದ್ಧ ವಿಮಾನ ಯೋಜನೆಯ ಪ್ರಥಮ ಹಾರಾಟ 04/01/2001ರಲ್ಲಿ ನಡೆಯಿತು. ಆದರೆ ಸಂಪೂರ್ಣ ಸಜ್ಜುಗೊಂಡ ವಿಮಾನಗಳನ್ನು ವಾಯುಪಡೆಯ 45ನೇ ಫ್ಲೈಯಿಂಗ್ ಡಾಗರ್ಸ್ ತುಕಡಿಯಲ್ಲಿ ಸೇರ್ಪಡೆ ಮಾಡಿದ್ದು 01/07/2016ರಂದು! ಇಷ್ಟೊಂದು ದೀರ್ಘ ಕಾಲದಲ್ಲಿ ಯೋಜನೆಗಾಗಿ ತಲೆಮಾರುಗಳ ಸಹಸ್ರಾರು ಜನರು ದುಡಿದಿದ್ದಾರೆ. ಎದುರಾದ ಸಂಕಟಗಳು ಹಲವಾರು. ಆಳುವವರ ನಿರ್ಲಕ್ಷ್ಯ, ಹಣಕಾಸಿನ ಕೊರತೆ, ವಿದೇಶಗಳು ಹೇರಿದ ನಿರ್ಬಂಧಗಳು, ಕಾಲಕಾಲಕ್ಕೆ ತಂತ್ರಜ್ಞಾನದ ಉನ್ನತೀಕರಣದ ಸಮಸ್ಯೆ, ಇವಾವುವೂ ನಮ್ಮ ವಿಜ್ಞಾನಿಗಳ ಉತ್ಸಾಹವನ್ನು ಕುಂದಿಸಲಿಲ್ಲ. ಈ ಕುರಿತಾದ ಪ್ರತಿಯೊಂದು ವಿವರವನ್ನೂ ಲೇಖಕರು ದಾಖಲಿಸಿದ್ದಾರೆ. ತೇಜಸ್ ಯುದ್ಧವಿಮಾನದ ಯಶೋಗಾಥೆ ಪ್ರತಿಯೊಬ್ಬ ಭಾರತೀಯನೂ ಗರ್ವದಿಂದ ತಲೆಯೆತ್ತಿ ನಡೆಯುವಂತೆ ಮಾಡುತ್ತದೆ. ಇಂದು ಅಮೆರಿಕ, ಇಂಗ್ಲೆಂಡ್ ಮುಂತಾದ ಅಭಿವೃದ್ಧಿ ಹೊಂದಿದ ದೇಶಗಳೂ ಸೇರಿದಂತೆ ಜಗತ್ತಿನಾದ್ಯಂತ ಬೇಡಿಕೆಯಲ್ಲಿರುವ ತೇಜಸ್ ಯುದ್ಧವಿಮಾನದ ವಿಶೇಷತೆಗಳ ಬಗ್ಗೆ ಒಂದು ವಿಶೇಷ ಲೇಖನವನ್ನೇ ಬರೆಯಬೇಕಾದೀತು. ಪುಸ್ತಕದ ಪರಿಚಯಕ್ಕೆ ಸೀಮಿತವಾಗಿ ಹೇಳುವುದಾದರೆ, ಸೇನೆಯ ಹಿರಿಯ ಅಧಿಕಾರಿಗಳಾದ ಏರ್ ಚೀಫ್ ಮಾರ್ಷಲ್ ಆರ್. ಕೆ. ಎಸ್. ಬದೂರಿಯಾ ಅವರ ಮುನ್ನುಡಿ, ಡಿ. ಆರ್. ಡಿ. ಓ. ಅಧ್ಯಕ್ಷರಾದ ಡಾ. ಜಿ. ಎಸ್. ಸತೀಶ್‌ರೆಡ್ಡಿಯವರ ಪರಿಚಯ ಲೇಖನ, ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ನೆನಪುಗಳ ದಾಖಲೆಗಳು, ದೇಶದ ರಕ್ಷಣಾ ಸಲಹೆಗಾರರಾದ ಡಾ. ವಿ. ಕೆ. ಆತ್ರೇಯವರ ಮಾತುಗಳು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿವೆ.

ಎಲ್. ಸಿ. ಎ ಕಾರ್ಯಕ್ರಮದ ಉಗಮ, ಎ. ಡಿ. ಎ. ಸಂಸ್ಥೆಯ ಸ್ಥಾಪನೆ, ಯೋಜನೆಯ ಪ್ರಾರಂಭಿಕ ರೂಪುರೇಷೆಗಳು, ನಿರ್ಮಾಣದ ಹಂತಗಳು, ಎದುರಿಸಿದ ಸಮಸ್ಯೆಗಳು, ಹಣಕಾಸಿನ ವಿವರಗಳು, ಮೊದಲ ಹಾರಾಟ, ತೇಜಸ್ ಎಂದು ನಾಮಕರಣ, ತಂತ್ರಜ್ಞಾನದ ಉನ್ನತೀಕರಣ, ಉತ್ಪಾದನೆ, ಏರ್‌ಶೋಗಳಲ್ಲಿ ಪ್ರದರ್ಶನ, ವಿದೇಶೀಯರ ಆಸಕ್ತಿ ಮುಂತಾಗಿ ತೇಜಸ್ ಲಘು ಯುದ್ಧ ವಿಮಾನ ನಿರ್ಮಾಣ ಮತ್ತು ಅಭಿವೃದ್ಧಿಯ ಕುರಿತ ಅಧ್ಯಾಯಗಳು ಕ್ರಮಾಗತವಾಗಿ ತೆರೆದುಕೊಳ್ಳುತ್ತವೆ. ಲೇಖನದುದ್ದಕ್ಕೂ ಕಾಣಿಸುವ ಸಂಕ್ಷಿಪ್ತ ಪದಗಳ ವಿಸ್ತೃತ ರೂಪ ವನ್ನೂ ಪಾರಿಭಾಷಿಕ ಶಬ್ದಗಳ ಅರ್ಥ ಹಾಗೂ ವಿವರಣೆಗಳನ್ನೂ ಪುಸ್ತಕದ ಕೊನೆಯಲ್ಲಿ ನೀಡಲಾಗಿದ್ದು ಓದುಗರಿಗೆ ಸಹಾಯಕವಾಗಿವೆ.

ತೇಜಸ್ ಲಘು ಯುದ್ಧ ವಿಮಾನದ ತಯಾರಿಕೆಯಲ್ಲಿ ಕೈ ಜೋಡಿಸಿದ ಖಾಸಗಿ ಸಂಸ್ಥೆಗಳ ವಿವರಗಳನ್ನು ಪುಸ್ತಕದ 25ನೇ ಅಧ್ಯಾಯದಲ್ಲಿ ಓದುವಾಗ ಇಂತಹ ಒಂದು ಮಹತ್ವದ ಯೋಜನೆಯಲ್ಲಿ ಇಡೀ ದೇಶವೇ ಭಾಗಿಯಾಗಿರುವುದು ಕಂಡು ಬರುತ್ತದೆ. ಖಾಸಗಿ-ಸರಕಾರಿ ಸಹಭಾಗಿತ್ವಕ್ಕೆ ಮತ್ತು ಆತ್ಮನಿರ್ಭರ ಭಾರತದ ನೀತಿಗೆ ತೇಜಸ್ ಒಂದು ಜ್ವಲಂತ ಉದಾಹರಣೆ.

200 ಪುಟಗಳ ಕಾಫಿ ಟೇಬಲ್ ಮಾದರಿಯ ಈ ಪುಸ್ತಕ ಆಕರ್ಷಕ ರಕ್ಷಾಪುಟವನ್ನು ಹೊಂದಿದೆ. ಕಣ್ಣಿಗೆ ಹಿತವಾದ ಮುದ್ರಣ, ಉತ್ತಮ ದರ್ಜೆಯ ಅಪರೂಪದ ಛಾಯಾಚಿತ್ರಗಳನ್ನು ಈ ಪುಸ್ತಕ ಹೊಂದಿದೆ. ರಕ್ಷಣಾ ಇಲಾಖೆ ವೈಜ್ಞಾನಿಕ ಮಾಹಿತಿ ಮತ್ತು ದಾಖಲೆ ಕೇಂದ್ರ (DESI-DOC) ಪ್ರಕಟಿಸಿರುವ ಈ ಹೊತ್ತಿಗೆಯ ಲಭ್ಯತೆ ಮತ್ತಿತರ ವಿವರಗಳಿಗಾಗಿ ಅನಂತಕುಮಾರ್ ಪ್ರತಿಷ್ಠಾನವನ್ನು ಸಂಪರ್ಕಿಸಬಹುದು.

**-ಕೆ. ಜನಾರ್ದನ ತುಂಗ**

# ಸರಳ ಯೋಗಾಭ್ಯಾಸ

**ಎಸ್. ರಾಘವೇಂದ್ರ ಪ್ರಸಾದ್**
ಅಧ್ಯಕ್ಷರು - ಸಹಬಾಳ್ವೆ

## ಅರ್ಧ ಚಕ್ರಾಸನ ( Half Wheel Pose)



ಈ ಆಸನ ಮಾಡುವಾಗ ನಮ್ಮ ದೇಹ ಅರ್ಧ ಚಕ್ರ ಅಥವಾ ಅರ್ಧ ಗಾಲಿಯಂತೆ ಇರುವುದರಿಂದ ಇದನ್ನು ಅರ್ಧ ಚಕ್ರಾಸನ ಎಂದು ಕರೆಯಲಾಗಿದೆ.

**ಆಸನ ಮಾಡುವ ರೀತಿ-** 1) ಸಹಜ ಸ್ಥಿತಿಯಲ್ಲಿ ನೇರವಾಗಿ ನಿಂತುಕೊಳ್ಳಬೇಕು. 2) ನಂತರ ಸೊಂಟದ ಮೇಲೆ ಎರಡು ಕೈಗಳ ಬೆರಳುಗಳನ್ನು ಒಟ್ಟಿಗೆ ಜೋಡಿಸುವುದು ಮತ್ತು ಬೆನ್ನ ಹಿಂದೆ ಹೆಬ್ಬೆರಳುಗಳ ತುದಿ ತಾಗಿಸುವುದು. 3) ಉಸಿರನ್ನು ತೆಗೆದುಕೊಂಡು ನಿಧಾನವಾಗಿ ಸೊಂಟದ ಮೇಲ್ಭಾಗದಿಂದ ಹಿಂದಕ್ಕೆ ಆದಷ್ಟು ಬಾಗಬೇಕು. 4) ತಲೆಯನ್ನು ಹಿಂದಕ್ಕೆ ಸರಿಸಿ ಕುತ್ತಿಗೆಯ ಸ್ನಾಯುಗಳನ್ನು ಹಿಗ್ಗಿಸಬೇಕು. 5) ಈ ಭಂಗಿಯಲ್ಲಿ ಸ್ವಲ್ಪ ಹೊತ್ತು (೧೫ ಸೆ. ಅಥವಾ ಆದಷ್ಟು ಸಮಯ) ಸಹಜ ಉಸಿರಾಟದೊಂದಿಗೆ ನಿಲ್ಲಬೇಕು. 6) ತದನಂತರ ನಿಧಾನವಾಗಿ ಉಸಿರು ಬಿಡುತ್ತಾ ಸಹಜ ಸ್ಥಿತಿಗೆ ಹಿಂತಿರುಗುವುದು.

**ಆಸನದ ಪ್ರಯೋಜನಗಳು-** 1) ತಲೆಯ ಭಾಗಕ್ಕೆ ಹೆಚ್ಚಿನ ರಕ್ತ ಸಂಚಾರ ಆಗುತ್ತದೆ ಹಾಗೂ ನರ ಮಂಡಲ ಚೇತನಗೊಳ್ಳುತ್ತದೆ. 2) ಬೆನ್ನು, ಕುತ್ತಿಗೆ ಮತ್ತು ಹೊಟ್ಟೆಯ ಸ್ನಾಯುಗಳು ಬಲಪಡಿಸುತ್ತದೆ. 3) ಶ್ವಾಸಕೋಶದ ಸಾಮರ್ಥ್ಯ ಹೆಚ್ಚಿಸುತ್ತದೆ. 4) ಈ ಆಸನ ನಿಧಾನವಾಗಿ ಮಾಡುವುದರಿಂದ cervical spondylitis ತೊಂದರೆ ಉಪಶಮನವಾಗುತ್ತದೆ. 5) ಆಸ್ತಮಾ ಮತ್ತು ಥೈರಾಯ್ಡ್ ಗ್ರಂಥಿಯ ಆರೋಗ್ಯ ವರ್ಧನೆಗೆ ಉಪಯುಕ್ತ. 6) ದೇಹದ ಆಕಾರ ಉತ್ತಮಗೊಳಿಸುತ್ತದೆ, ಹಾಗೂ ಭಂಗಿಯ ದೋಷ ಇರುವವರಿಗೆ ಈ ಆಸನ ಒಳ್ಳೆಯದು.

**ಎಚ್ಚರಿಕೆ ವಹಿಸಬೇಕಾದವರು-** 1) ಕುತ್ತಿಗೆ, ಸೊಂಟ ಹಾಗೂ ಬೆನ್ನುಮೂಳೆ ಶಸ್ತ್ರ ಚಿಕಿತ್ಸೆಗೆ ಒಳಗೊಂಡವರು ಅಥವಾ ಗಾಯಗೊಂಡವರು ಈ ಅಸನದಿಂದ ದೂರವಿರಬೇಕು. 2) Vertigo ಸಮಸ್ಯೆ ಇದ್ದವರು ಜಾಗರೂಕತೆಯಿಂದ ಇರಬೇಕು 3) ಹೆಚ್ಚಿನ ರಕ್ತದ ಒತ್ತಡ ಇರುವ ಸಮಯದಲ್ಲಿ ಈ ಆಸನ ಮಾಡಬಾರದು 4) ಗರ್ಭಿಣಿಯರು ಭ್ರೂಣದ ಮೇಲೆ ಒತ್ತಡ ಮಾಡುವ ಯಾವುದೇ ಭಂಗಿಯನ್ನು ಮಾಡಬಾರದು.

# ಅದಮ್ಯ ಚೇತನ ಆಗಸದೆತ್ತರಕೆ ಬೆಳೆಯಲಿ

## ಬೇಲಿಮಠದ ಶ್ರೀ ಶಿವರುದ್ರ ಸ್ವಾಮಿಗಳ ಆಶೀರ್ವಚನ



ಸರ್ವೇ ಭವಂತು ಸುಖಿನಃ | ಸರ್ವೇ ಸಂತು ನಿರಾಮಯಾಃ | ಸರ್ವೇ ಭದ್ರಾಣಿ ಪಶ್ಯಂತು | ಮಾ ಕಶ್ಚಿತ್ ದು:ಖಭಾಗ್ ಭವೇತ್| ಓಂ ಶಾಂತಿಃ ಶಾಂತಿಃ ಶಾಂತಿಃ ||

ಅದಮ್ಯ ಚೇತನ ಸಂಸ್ಥೆಯು ಆಚರಿಸುತ್ತಿರುವ ಅಮೃತ ಮಹೋತ್ಸವ ಅನಂತ ಸೇವಾ ಉತ್ಸವವು ಅತ್ಯಂತ ವಿಶೇಷವಾದುದು. ಇದು ಎಲ್ಲರ ಬಾಳನ್ನು ಬೆಳಕಿನೆಡೆಗೆ ಕೊಂಡೊಯ್ಯುವಂಥದ್ದು. "ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂ ಗಮಯ" ಎಂಬ ಋಷಿವಾಣಿಯನ್ನು ಸಂಕಲ್ಪವಾಗಿರಿಸಿಕೊಂಡು ನಿರಂತರವಾಗಿ ಎಲ್ಲರನ್ನು ಅಮೃತದೆಡೆಗೆ ಕೊಂಡೊಯ್ಯುವಂತಹ ಅನಂತ ಸೇವಾ ಉತ್ಸವ, ಒಂದು ಅನಂತ ಯಾನ; ಇದರಲ್ಲಿ ನಾವೆಲ್ಲ ಭಾಗಿಯಾಗಿದ್ದೇವೆ.

ಸೇವೆಗೆ ಅಂತ್ಯವೇ ಇಲ್ಲ; ಅದು ಅನಂತ. ಅದಕ್ಕೆ ಬೇಕಾಗಿರುವ ಉತ್ಸಾಹವನ್ನು ಸಂಪೂರ್ಣವಾಗಿ ಅದುಮಿಡುವುದು ಅಸಾಧ್ಯ; ಅದು ಅದಮ್ಯ. ಹೀಗಾಗಿ ಅದಮ್ಯ, ಅನಂತ ಎರಡರ ಅದ್ಭುತ ಸಂಯೋಗವನ್ನು ನಾವಿಂದು ನೋಡುತ್ತಿದ್ದೇವೆ. ಅನಂತಕುಮಾರರ ತಾಯಿ, ಶ್ರೀಮತಿ ಗಿರಿಜಾ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ಲೋಕಹಿತದ ಮಾರ್ಗದಲ್ಲಿ ಜನರನ್ನು ಮುನ್ನಡೆಸುವ ಕಾಯಕದಲ್ಲಿ ತಮ್ಮ ಬದುಕನ್ನೇ ಬಯಲಾಗಿಸಿಕೊಂಡವರು, ಅನಂತಕುಮಾರರು. ಅವರು ಎಷ್ಟೇ ಮಹತ್ವದ ಜವಾಬ್ದಾರಿಯನ್ನು ಹೊತ್ತಿದ್ದರೂ ಸಾಮಾನ್ಯ ಮಕ್ಕಳ ಮತ್ತು ಜನಸಾಮಾನ್ಯರ ಹಿತಾಸಕ್ತಿಯ ಬಗ್ಗೆ ಪ್ರಥಮ ಪ್ರಾಶಸ್ತ್ಯ ನೀಡಿದ್ದರು. ಅವರನ್ನು ನೆನೆಸಿಕೊಂಡಾಗ, ಜಿ.ಎಸ್. ಶಿವರುದ್ರಪ್ಪನವರ ಒಂದು ಕವನ ಜ್ಞಾಪಕಕ್ಕೆ ಬರುತ್ತದೆ. "ಬಾಂದಳ ಚುಂಬಿತ ಶುಭ್ರ ಹಿಮಾವೃತ ತುಂಗ ಶೃಂಗದಲಿ ಗೃಹವಾಸಿ" ಭಗವಂತ . ಜೊತೆಗೆ ಅವನು "ದೀನ ಅನಾಥರ ದುಃಖ ದರಿದ್ರರ ಮುರುಕು ಗುಡಿಸಲಲಿ ಉಪವಾಸಿ". ಅಷ್ಟು ಎತ್ತರದಲ್ಲಿದ್ದರೂ ಸಾಮಾನ್ಯರನ್ನೂ ಗಮನಿಸಿಕೊಳ್ಳುವವರನ್ನು ನಾವು ಪರಮಾತ್ಮ, ಮಾರ್ಗದರ್ಶಕ ದೇವರು ಎಂದು ಕರೆಯುತ್ತೇವೆ. ಅನಂತಕುಮಾರರ ಅನಂತವಾದ ಆತ್ಮವು ಇದೇ ರೀತಿಯಲ್ಲಿ ಅದಮ್ಯ ಚೇತನದಲ್ಲಿಯೇ ಇರುತ್ತದೆ. ಅವರು ಇಂದು ನಮ್ಮ ನಡುವೆ ಇಲ್ಲದಿದ್ದರೂ ಅವರ ತೇಜಸ್ಸು ತೇಜಸ್ವಿನಿಯಾಗಿ ನಮ್ಮೆಲ್ಲರನ್ನು ಮುನ್ನಡೆಸುತ್ತಿದೆ. ಅದಮ್ಯ ಸೇವಾ ಉತ್ಸವದಲ್ಲಿ ಕೈಜೋಡಿಸುವ ಪ್ರತಿಯೊಬ್ಬರಿಗೂ ಇಲ್ಲಿ ಒಂದೊಂದು ವಿಶೇಷತೆ ಕಾಣಿಸುತ್ತದೆ.

ಇದು ಗವಿಗಂಗಾಧರೇಶ್ವರನ ಅನುಗ್ರಹದಿಂದ ಪುನೀತವಾದ ಪುಣ್ಯಭೂಮಿ. ನಮ್ಮ ಪೂಜ್ಯ ಗುರುಗಳ ನೆಲೆ ಈ ಭೂಮಿ. ಶಿವಾಜಿ ಮಹಾರಾಜರು ವಿದ್ಯಾಭ್ಯಾಸ ಮಾಡಿದ ಪುಣ್ಯಭೂಮಿಯಿದು ಎಂಬುದನ್ನು ನಾವು ಮರೆಯಬಾರದು. ಶಿವಾಜಿಯ ಗುರು ದಾದಾಜೀ ಕೊಂಡದೇವ ಅವರು ತಪಸ್ಸು ಮಾಡಿದ ಕ್ಷೇತ್ರವಿದು. ಶಹಾಜೀ ಮಹಾರಾಜರು ತಮ್ಮ ಮಕ್ಕಳು ಸ್ವತಂತ್ರವಾಗಿ ಅದಮ್ಯ ಚೇತನವಾಗಿ ಬೆಳೆಯಬೇಕು ಎಂಬ ಉದ್ದೇಶದಿಂದ ಅವರನ್ನು ವಿದ್ಯಾಭ್ಯಾಸಕ್ಕಾಗಿ ಇಲ್ಲಿ ಬಿಟ್ಟಿದ್ದರು. ಹೀಗಾಗಿ, ಇಲ್ಲಿರುವ ಗೋಸಾಯಿ ಮಠ ಅಂದಿನಿಂದಲೂ ತನ್ನದೇ ಆದ ಧಾರ್ಮಿಕ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತ ಬಂದಿದೆ. ಶಿವಾಜಿ ಮಹಾರಾಜರ ತಂದೆ ಶಹಾಜೀ ಮಹಾರಾಜರು ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಸ್ಥಾನಕ್ಕೆ ಧರ್ಮದತ್ತಿಯನ್ನು ನೀಡಿದ ಬಗ್ಗೆ ಶಾಸನಗಳಿವೆ. ಶಿವಾಜಿ ಮಹಾರಾಜರಿಗೆ ಸ್ವಾಭಿಮಾನಿಯಾಗಿ ಪರಿಪೂರ್ಣತೆಯ ಹಾದಿಯಲ್ಲಿ ನಡೆಯಲು ಪ್ರೇರಣೆ ಕೊಟ್ಟ ಪುಣ್ಯಕ್ಷೇತ್ರವಿದು. ಇದರಿಂದಾಗಿಯೇ ತೇಜಸ್ವಿನಿಯವರಿಗೆ ಅದಮ್ಯ ಚೇತನದ ಮೂಲಕ ಸಹಸ್ರಾರು ಸಂಖ್ಯೆಯ ಮಕ್ಕಳಿಗೆ ಆಹಾರದ ವ್ಯವಸ್ಥೆಯನ್ನು ಮಾಡುವುದು ಸಾಧ್ಯವಾಗಿದೆ. ಬೇರೆ ಕಡೆಯಲ್ಲಿ ಬರೀ ಅಕ್ಕಿ, ಬೇಳೆಗಳನ್ನು ಮಾತ್ರ ಬೇಯಿಸಿದರೆ ಇಲ್ಲಿ ಶಿವಾಜಿಯ ಪ್ರೇರಕ ಶಕ್ತಿಯಾಗಿರುವ ಪುಣ್ಯಭೂಮಿಯ ಸಾರಸತ್ವವೂ ಸಹ ಆಹಾರದಲ್ಲಿ ಸೇರಿಕೊಂಡಿದೆ. ಅದಮ್ಯ ಚೇತನದಲ್ಲಿ ಪ್ರಸಾದ ಸ್ವೀಕಾರ ಮಾಡುವ ಮಕ್ಕಳೆಲ್ಲರೂ ಸ್ವಾಭಿಮಾನಿಗಳಾಗಿ ಲೋಕಕ್ಕೆ ಬೆಳಕಾಗಿ ಬದುಕುತ್ತಾರೆ ಅನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

75 ವರ್ಷಕ್ಕೆ ಅಮೃತ ಮಹೋತ್ಸವ. ಈ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ತಮ್ಮನ್ನು ತೊಡಗಿಸಿಕೊಂಡು ತ್ಯಾಗ, ಬಲಿದಾನ ಮಾಡಿದ 75 ಜನ ದೈವೀಶಕ್ತಿಗಳನ್ನು ಪರಿಚಯಿಸಿದ್ದಾರೆ. ಪ್ರಕೃತಿಯಲ್ಲಿರುವ 75 ಗಿಡ ಮೂಲಿಕೆಗಳ ಪ್ರದರ್ಶಿನಿ ಏರ್ಪಡಿಸಿದ್ದಾರೆ. 75 ಒಂದು ವಿಶಿಷ್ಟವಾದ ಸಂಖ್ಯೆ. 5 ಪ್ರಕೃತಿಯ ಪಂಚಭೂತಗಳನ್ನು ಪ್ರತಿನಿಧಿಸಿದರೆ ಅದರ ರಕ್ಷಣೆಗಾಗಿ ನೀನು ಏಳು ಎಂದು 7 ಹೇಳುತ್ತದೆ. ಹೀಗಾಗಿ ಇದು ಪರಿಸರ ಪ್ರಜ್ಞೆಯನ್ನು ಜಾಗೃತಿಗೊಳಿಸುವುದರ ಸಂಕೇತ. ಏಳು ಮತ್ತು ಐದು ಸೇರಿದರೆ ಹನ್ನೆರಡು – ನೀವು ಒಂದು ದಿನ ಕೆಲಸ ಮಾಡಿದರೆ ಸಾಲದು, ವರ್ಷದ ಹನ್ನೆರಡೂ ತಿಂಗಳು ಕೆಲಸ ಮಾಡಬೇಕು.

ಉತ್ತರಾಯಣ ಪುಣ್ಯಕಾಲ ಪ್ರಾರಂಭವಾಗುವ ಸಮಯಕ್ಕೆ ಈ ಜಗತ್ತಿಗೆ ಬೆಳಕು ನೀಡುವ ಸೂರ್ಯ ಗಂಗಾಧರೇಶ್ವರನ ಸನ್ನಿಧಿಗೆ ಬಂದು ಆಶೀರ್ವಾದ ಪಡೆಯುತ್ತಾನೆ. ಯಾಂತ್ರೀಕೃತವಾಗುತ್ತಿರುವ ಈ ಭೂಮಿಯ ಒಳಗೆ ಇಂತಹ ಎಷ್ಟು ಅಮೃತ ಫಲಗಳಿವೆ ಎಂಬುದನ್ನು ನಾವು ಗುರುತಿಸಬೇಕು. ನಮ್ಮ ನೆಲದ ಬೆಲೆ ಮತ್ತು ಅದರ ಯೋಗ್ಯತೆಯನ್ನು ನಾವು ಉಳಿಸಿಕೊಂಡು ಹೋಗಬೇಕು. ಇಂತಹ ಒಂದು ಕಾರ್ಯಕ್ಕೆ ನಿರಂತರವಾಗಿ ಪ್ರೇರಣೆ ಕೊಡುವ ಕೆಲಸವನ್ನು ತಾಯಿ ತೇಜಸ್ವಿನಿಯವರು ಮಾಡಿಕೊಂಡು ಬಂದಿದ್ದಾರೆ. ಅವರ ಆ ಎಲ್ಲ ಸಂಕಲ್ಪಗಳು ಅನಂತವಾಗಿ ಮುಂದುವರೆಯಲಿ, ಅದನ್ನು ಸಾಧಿಸುವ ಅದಮ್ಯ ಛಲವನ್ನು ಅವರಿಗೆ ಗವಿಗಂಗಾಧರೇಶ್ವರ ಸ್ವಾಮಿ ಕರುಣಿಸಲಿ. ಮಕ್ಕಳಲ್ಲಿ ಪರಿಸರ ಪ್ರಜ್ಞೆ ಮತ್ತು ಸುಸಂಸ್ಕೃತ ವ್ಯವಸ್ಥೆಗಳನ್ನು ರೂಪಿಸುವ ಸಾಂಸ್ಕೃತಿಕ ಜವಾಬ್ದಾರಿಯನ್ನು ಸಂಸ್ಥೆ ನಿರ್ವಹಿಸುತ್ತಿದೆ. ನಮ್ಮ ಮಕ್ಕಳು ಇದರಲ್ಲಿ ತನ್ಮಯತೆಯಿಂದ ಭಾಗವಹಿಸಲಿ. ವರ್ಷದ ಬುತ್ತಿಯನ್ನು ಒಮ್ಮೆಗೇ ಕಟ್ಟಿಕೊಂಡು ಹೋಗಲಿ, ಅದನ್ನು ತಮ್ಮ ಸ್ನೇಹಿತರಿಗೂ ಹಂಚಲಿ ಎಂದು ಹಾರೈಸುತ್ತೇವೆ. ಈ ಕಾರ್ಯಕ್ರಮ ಅನಂತವಾಗಿ ನಡೆಯಲಿ, ಇದು ಅನಂತ ಚೇತನದ ಸಂಕಲ್ಪ, ಅನಂತಯಾನದಲ್ಲಿ ಅನಂತ ಸೇವೆಯ ನೆಲೆಯಲ್ಲಿ ಪರಿಪೂರ್ಣವಾಗಿ "ಅನಂತದಿಂ ದಿಗಂತದಿಂ" ಎಂಬ ಕವಿವಾಣಿಯಂತೆ ಆಕಾಶದ ಎತ್ತರಕ್ಕೆ ಅದಮ್ಯ ಚೇತನ ಸಂಸ್ಥೆ ಬೆಳೆಯಲಿ.

## ಗೀತೆಯ ಸಂದೇಶ



ಶ್ರೀ ಕೃಷ್ಣ ಸಂಪಗಾಂವಕರ, ಶಾಂತಿ ಕುಟೀರ, ಕಣ್ಣೂರು

ಶ್ರೀ ಸದ್ಗುರು ಪ್ರಸನ್ನ||

**ಭಗವದ್ಗೀತಾ ಚಿಂತನ ಭಾಗ - ೫**

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ|

ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ ||
2- 23

ಆತ್ಮನನ್ನು ಶಸ್ತ್ರಗಳು ಕತ್ತರಿಸಲು ಸಾಧ್ಯವಿಲ್ಲ. ಅಗ್ನಿ ಈ ಆತ್ಮನನ್ನು ಸುಡಲು ಅಸಮರ್ಥ. ನೀರು ಆತ್ಮನನ್ನು ಒದ್ದೆ ಮಾಡಲಾರದು, ಗಾಳಿ ಒಣಗಿಸಲು ಅಸಮರ್ಥ. ಹೀಗೆ ಆತ್ಮನಿಗೆ ಯಾವ ಆಪತ್ತಿಲ್ಲ.

ಅರ್ಜುನನು ಯುದ್ಧ ಮಾಡುವುದು ಬೇಡ, ಯಾಕೆಂದರೆ ಕುಟುಂಬಗಳ ಹಾನಿಯಾಗುತ್ತವೆ ಎಂದು ಕಾರಣ ಕೊಟ್ಟಿರುವನು. ನಾಶವಾಗುವುದು ಶರೀರವೇ ಹೊರತು ಶರೀರಿ ಅಲ್ಲ. ಶರೀರವು ಅವ್ಯಕ್ತದಿಂದ ಬಂದು ವ್ಯಕ್ತವಾಗಿ ಮತ್ತೆ ಕಾಣದಾಗುವದು. ಶರೀರ ನಿರ್ಮಾಣವಾಗಿರುವುದು ಪಂಚತತ್ವಗಳಿಂದ - ಪೃಥ್ವಿ, ಅಪ್, ತೇಜ, ವಾಯು ಮತ್ತು ಆಕಾಶ. ಆದರೆ ಇವು ಯಾವುದಕ್ಕೂ ನಿಲುಕದ, ಅವಿನಾಶಿ, ಶಾಶ್ವತ ತತ್ವ ಒಂದು ಇದೆ, ಅದೇ ನಿನ್ನ ನಿಜ ಸ್ವರೂಪ. ಅದು ಎಂದೆಂದೂ ಹೆಚ್ಚು - ಕಡಿಮೆ ಆಗದು. ಯಾವ ಶಕ್ತಿಯೂ ಅದನ್ನು ನಾಶಪಡಿಸಲಾರದು. ಏಕೆಂದರೆ ಅದೇ ಸಕಲಕ್ಕೂ ಆಧಾರ, ಕಾರಣೀಭೂತ. ಹೀಗಾಗಿ, ಹೇ ಅರ್ಜುನ! ಭ್ರಾಂತಿ ಬಿಡು, ನಿನ್ನ ಕರ್ತವ್ಯವನ್ನು ನೀನು ಮಾಡು.

# ಬೆಂಗಳೂರು ನಗರ ಜಿಲ್ಲೆಯ ಕೆಲವು ಪ್ರಾಚೀನ ದೇವಾಲಯಗಳು

**ದೇಗುಲದರ್ಶನ ಮಾಲಿಕೆ - 18**

ಈ ತಿಂಗಳ ದೇಗುಲದರ್ಶನ ಕಾರ್ಯಕ್ರಮವು ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕೆಲವು ದೇವಾಲಯಗಳನ್ನು ಪರಿಚಯಿಸುತ್ತಿದೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಎಲ್ಲರಿಗೂ ಪರಿಚಿತ. ಇದಕ್ಕೆ ಹೊಂದಿಕೊಂಡಂತಿರುವ ಬನ್ನೇರುಘಟ್ಟ ಎಂಬ ಊರಿನಲ್ಲಿ ಕೆಲವು ಪ್ರಾಚೀನ ದೇವಾಲಯಗಳಿವೆ. ಇಲ್ಲಿರುವ ಚಂಪಕಧಾಮ ದೇವಾಲಯ 12 ನೇ ಶತಮಾನದಷ್ಟು ಹಳೆಯದು. ಶ್ರೀದೇವಿ ಭೂದೇವಿಯರ ಸಹಿತ ಮಹಾವಿಷ್ಣುವಿನ ಮೂರ್ತಿಯನ್ನು ಚಂಪಕಧಾಮ ಎಂಬ ಹೆಸರಿನಿಂದ ಇಲ್ಲಿ ಅರ್ಚಿಸಲಾಗುತ್ತಿದೆ. ಪಕ್ಕದ ಗುಡ್ಡದ ಮೇಲೆ ಲಕ್ಷ್ಮೀ ನರಸಿಂಹ ದೇವಾಲಯವಿದ್ದು, ಇಲ್ಲಿಂದ ಕಾಣುವ ಸುತ್ತಲಿನ ಪರಿಸರ ರಮಣೀಯವಾಗಿದೆ. ಚಂಪಕಧಾಮ ದೇವಾಲಯದ ಎದುರಿನ ರಸ್ತೆಯ ಕೊನೆಯಲ್ಲಿ ಆಂಜನೇಯನ ಗುಡಿಯಿದೆ. ಗುಡಿಯ ಆವರಣದಲ್ಲಿ ಇರಿಸಿರುವ ಆತ್ಮಬಲಿದಾನದ ವೀರಗಲ್ಲುಗಳು ಆಸಕ್ತಿಮೂಡಿಸುವಂತಿವೆ.

ಬನ್ನೇರುಘಟ್ಟದಿಂದ 20 ಕಿಮೀ ದೂರದ ಹಾರಗದ್ದೆಯಲ್ಲಿ ಚನ್ನಕೇಶವ ದೇವಾಲಯವಿದೆ. ಮೂಲತಃ ಚೋಳರ ಕಾಲದ (11ನೇ ಶತಮಾನ) ಈ ದೇವಾಲಯವನ್ನು ಸ್ಥಳೀಯರು ಜೀರ್ಣೋದ್ಧಾರಮಾಡಿ ಅಭಿವೃದ್ಧಿಪಡಿಸಿರುವ ಬಗೆ ಪ್ರಶಂಸನೀಯ.

ಮುಂದೆ, 20 ಕಿಮೀ ದೂರದ ಆನೇಕಲ್ಲಿನಲ್ಲಿ ಅನೇಕ ದೇವಾಲಯಗಳಿವೆ. ಭವಾನಿಶಂಕರ, ಅಮೃತ ಮಲ್ಲಿಕಾರ್ಜುನ ದೇವಾಲಯಗಳಲ್ಲಿರುವ ಶಿವಲಿಂಗಗಳು ಪುರಾತನವಾದವು. ಮಲ್ಲಿಕಾರ್ಜುನ ಗುಡಿಯ ಎದುರಿಗಿನ ಕಂಬದ ಗಣಪತಿಗೆ ದಿನನಿತ್ಯ ವಿಶೇಷವಾಗಿ ಪೂಜೆ ಸಲ್ಲುತ್ತಿದೆ. ಊರ ನಡುವೆ ಇರುವ ಚೆನ್ನಕೇಶವ ದೇವಾಲಯವು ವಿಜಯನಗರದ ಕಾಲದ್ದು. ದೇಗುಲವನ್ನು ಮೂಲರೂಪಕ್ಕೆ ಧಕ್ಕೆ ಬಾರದಂತೆ ಇತ್ತೀಚೆಗೆ ನವೀಕರಿಸಲಾಗಿದೆ.

ಆನೇಕಲ್ಲಿನಲ್ಲಿರುವ ಇನ್ನೊಂದು ಪ್ರಮುಖ ದೇವಾಲಯ ಶ್ರೀ ತಿಮ್ಮರಾಯಸ್ವಾಮಿಯ ಗುಡಿ. ಇಲ್ಲಿ ಪುರಾತನ ಕಾಲದಿಂದ ವೆಂಕಟೇಶನ ಉದ್ಭವರೂಪ ಶಿಲೆಯನ್ನು ಅರ್ಚಿಸಲಾಗುತ್ತಿದ್ದು, ಇತ್ತೀಚೆಗೆ ಹೊಸ ವಿಗ್ರಹವೊಂದನ್ನೂ ಪ್ರತಿಷ್ಠಾಪಿಸಲಾಗಿದೆ.

ಆನೇಕಲ್ ನಿಂದ 17 ಕಿಮೀ ದೂರದ ನಾರಾಯಣ ಘಟ್ಟದಲ್ಲಿ ಶೈವ ವೈಷ್ಣವ ದೇಗುಲಗಳೆರಡೂ ಅಕ್ಕಪಕ್ಕದಲ್ಲಿಯೇ ಇವೆ. ಶ್ರೀ ರಾಮ ವರದರಾಜ ದೇವಾಲಯವು 11ನೇ ಶತಮಾನದ ಚೋಳರ ಆಳ್ವಿಕೆಯ ಕಾಲದ್ದು. ಪಕ್ಕದ ಪ್ರಸನ್ನ ನಂಜುಂಡೇಶ್ವರ ದೇಗುಲವು ವಿಜಯನಗರ ಕಾಲದ್ದೆನ್ನಲಾಗಿದೆ. ವರದರಾಜ ಸ್ವಾಮಿಯು ನೀಳಾದೇವಿ ಮತ್ತು ಸೌಮ್ಯನಾಯಕಿಯರೊಡನೆ ನಿಂತಿರುವ ಶಿಲ್ಪವು ಸುಂದರವಾಗಿದೆ. ಶಿವದೇಗುಲದಲ್ಲಿ ಗಣಪತಿ, ಪಾರ್ವತಿಯರ ಮೂರ್ತಿಗಳನ್ನು ಪ್ರತ್ಯೇಕ ಗುಡಿಗಳಲ್ಲಿ ಸ್ಥಾಪಿಸಲಾಗಿದೆ.

ಬೆಂಗಳೂರಿನ ಭಾಗವೇ ಆಗಿರುವ ಬೇಗೂರು, ಪೂರ್ವದಲ್ಲಿ ಗಂಗರ ಆಳ್ವಿಕೆಗೆ ಒಳಪಟ್ಟಿತ್ತು. ಇಲ್ಲಿ 9ನೇ ಶತಮಾನದಲ್ಲಿ ನಿರ್ಮಿತವಾದ ನಾಗೇಶ್ವರ ದೇವಾಲಯವಿದೆ. ಗಂಗರ ಶೈಲಿಯ ಅಪೂರ್ವ ನಿರ್ಮಾಣವಾದ ಈ ದೇಗುಲ ಸಂಕೀರ್ಣವು ವಿಶಾಲವಾಗಿದೆ. ಹೊರಗೋಡೆಗಳ ಮೇಲೂ ಒಳಗುಡಿಯಲ್ಲೂ ಇರುವ ಪೂರ್ವಕಾಲದ ಅನೇಕ ಶಿಲ್ಪಗಳು ದರ್ಶನೀಯವಾಗಿವೆ.

**ಟಿ.ಎಸ್. ಗೋಪಾಲ್ / ಕೆಂಗೇರಿ ಚಕ್ರಪಾಣಿ**








ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ನೋಡಲು ಬೇಕಾದ ಲಿಂಕ್ ಇಲ್ಲಿದೆ:
http://YouTube.com/AnanthkumarPratishthana





ಸಸ್ಯಲೋಕ ಪರಿಚಯ ಮಾಲಿಕೆ- 16

# ಬೆಣ್ಣೆ ಹಣ್ಣು (ಆವಕಾಡೊ)



**ಸಸ್ಯಶಾಸ್ತ್ರೀಯ ಹೆಸರು -** ಪರ್ಸಿಯಾ ಗ್ರಟಿಸೀಮಾ (Persea gratissima)

ಈ ಸಸ್ಯದ ಮೂಲ ಮೆಕ್ಸಿಕೋ ದೇಶದ ಕೆರಿಬಿಯನ್ ಪ್ರದೇಶ. ದಾಲ್ಚಿನ್ನಿ, ಕರ್ಪೂರಗಳಂತೆ ಹೂ ಬಿಡುವ ಈ ಸಸ್ಯವು ಮೆಕ್ಸಿಕೋ, ಇಂಡೋನೇಷ್ಯಾ, ಅಮೆರಿಕ, ಕೊಲಂಬಿಯಾ ಮುಂತಾದ ದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಬೆಂಗಳೂರಿಗೆ ಇದು 1819ರಲ್ಲಿ ಪರಿಚಿತವಾಯಿತು.

ಹಸಿರು-ಸಿಪ್ಪೆಯ, ಸೀಬೆ ಹಣ್ಣಿನ ಆಕಾರದಲ್ಲಿರುವ ಇರುವ ಆವಕಾಡೊಗಳು ವಾಣಿಜ್ಯ ದೃಷ್ಟಿಯಿಂದ ತುಂಬಾ ಬೆಲೆ ಬಾಳುವ ಹಣ್ಣುಗಳು.

**ಹಣ್ಣಿನ ಕೃಷಿ ಮತ್ತು ವಾಣಿಜ್ಯ ವಿಷಯ-** ಇಂದು ಜಗತ್ತಿನಾದ್ಯಂತ ಹೆಚ್ಚಾಗಿ ಕೃಷಿ ಮಾಡಲ್ಪಡುವ ಆವಕಾಡೋ ಹಣ್ಣು "ಪರ್ಸಿಯಾ ಅಮೇರಿಕಾನಾ" ಜಾತಿಯದು. ಆವಕಾಡೊ ಸಸ್ಯವನ್ನು ಬೀಜದಿಂದ ಬೆಳೆಸಬಹುದು.

ಹೆಚ್ಚಿನ ನೀರು, ಗೊಬ್ಬರ ಬೇಡದೇ ಬೆಳೆಯುವ ಗಿಡವಿದು. ಬಲಿತ ಹಣ್ಣುಗಳ ಬೀಜ ತೆಗೆದು ಮಣ್ಣು ಮರಳು ಗೊಬ್ಬರದ ಮಿಶ್ರಣ ತುಂಬಿರುವ ಪ್ಲಾಸ್ಟಿಕ್ ಚೀಲದಲ್ಲಿ ನಾಟಿ ಮಾಡಿ ಮನೆಯಲ್ಲಿಯೇ ಬೆಳೆಸಬಹುದು. ಅಥವಾ ಕಸಿ ಮಾಡಿಯೂ ಗಿಡ ಮಾಡಬಹುದು. ಸಾಕಷ್ಟು ಸೂರ್ಯನ ಬೆಳಕು ಮತ್ತು ಹರಿಯುವ ನೀರು ಈ ಗಿಡವು ಬೆಳೆಯಲು ಅವಶ್ಯಕ.

ವರ್ಷದಲ್ಲಿ ಎರಡು ಬಾರಿ ಫಲ ನೀಡುವ, ಯಾವುದೇ ರೋಗರುಜಿನ ಇಲ್ಲದ ಗಿಡವು ನೋಡಲು ಆಕರ್ಷಕವಾಗಿದ್ದು ಐದಾರು ವರ್ಷದಲ್ಲಿ ಫಲ ಕೊಡಲಾರಂಭಿಸುತ್ತದೆ. ಸಾಧಾರಣ ಒಂದು ಮರ ವಾರ್ಷಿಕವಾಗಿ ಸುಮಾರು 120 ಫಲಗಳನ್ನು ನೀಡುತ್ತದೆ; ಪ್ರತಿ ಹೆಕ್ಟೇರಿಗೆ ಸುಮಾರು 7 ಟನ್‌ಗಳಷ್ಟು ಇಳುವರಿ ತೆಗೆಯಬಹುದು. ಆವಕಾಡೊ ಮರವು ಸುಮಾರು 20 ರಿಂದ 70 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ, ಇದರ ಎಲೆಗಳು ಹಲಸಿನ ಎಲೆಗಳಂತೆ ಅಗಲ ಹಾಗೂ ಸಂಪಿಗೆಯ ಎಲೆಗಳಂತೆ ಉದ್ದವಿದ್ದು ಅಕ್ಕ ಪಕ್ಕದ ಎಲೆಗಳ ನಡುವೆ ಅಂತರವಿರುತ್ತದೆ. ನಸುಹಸಿರು-ಹಳದಿ ಬಣ್ಣದ ಹೂವುಗಳು ಗೊಂಚಲುಗಳಲ್ಲಿ ಕಾಣುತ್ತವೆ. ಬೆಣ್ಣೆಹಣ್ಣಿನ ಮರವು ಅತಿ ಚಳಿ ಅಥವಾ ಮಂಜನ್ನು ತಡೆದುಕೊಳ್ಳಲಾರದು. ಗಿಡ ಬೆಳೆಯಲು ಬೆಂಗಳೂರಿನಂತಹ ಸಮಶೀತೋಷ್ಣ ಹವೆ ಉತ್ತಮ.

ಬಾಳೆ ಹಣ್ಣಿನಂತೆ ಆವಕಾಡೊ ಕೂಡ ಮರದಲ್ಲಿ ಹಣ್ಣಾಗುವುದಿಲ್ಲ. ಮರದಿಂದ ಕಿತ್ತ ನಂತರ ಮಾಗಿ ಹಣ್ಣಾಗುತ್ತದೆ. ಒಂದು ವರ್ಷ ಚೆನ್ನಾಗಿ ಫಸಲು ಸಿಕ್ಕಿದರೆ ಅದರ ಮುಂದಿನ ವರ್ಷದ ಇಳುವರಿ ಭಾರೀ ಕಡಿಮೆಯಾಗುತ್ತದೆ. ಹಣ್ಣುಗಳು ಅತ್ಯಧಿಕ ಶರ್ಕರ ಪಿಷ್ಟದಿಂದ ಕೂಡಿರುವುದರಿಂದ ಒಂದು ವರ್ಷ ಶರ್ಕರಪಿಷ್ಟವನ್ನು ಸಂಗ್ರಹಿಸಿಕೊಂಡು ಎರಡನೇ ವರ್ಷ ಉತ್ತಮ ಇಳುವರಿ ಕೊಡುತ್ತದೆ.

ಗರಿಷ್ಠ ಪ್ರಮಾಣದ ಲಾಭಗಳಿಸಲು ಪ್ರಯತ್ನಿಸುವ ವಾಣಿಜ್ಯ ಬೆಳೆಗಾರರು ಆವಕಾಡೊಗಳನ್ನು ಹಲವು ತಿಂಗಳುಗಳವರೆಗೆ ಮರದಲ್ಲೇ ಬಿಡುತ್ತಾರೆ; ಉತ್ತಮ ಬೆಲೆ ಬಂದಾಗ ಹಣ್ಣುಗಳನ್ನು ಕೀಳುತ್ತಾರೆ. ಸಮೃದ್ಧವಾಗಿ ಬಿಡುವ ಹೂಗಳು ಅತಿ ಹೆಚ್ಚು ಜೇನು ಹುಳುಗಳನ್ನು ಆಕರ್ಷಿಸುತ್ತವೆ. ಇದರಿಂದ ಜೇನು ಸಾಕಣೆಗೂ ಇದು ಉಪಕಾರಿ.

ಆವಕಾಡೊ ಮರಗಳು ವೈರಸ್ ಮತ್ತು ಶಿಲೀಂಧ್ರಗಳಿಂದ ಬರುವ ಹಾಗೂ ಮಣ್ಣಿನ ಫಲವತ್ತತೆಯ ಕೊರತೆಯಿಂದ ಉಂಟಾಗುವ ರೋಗಗಳಿಂದ ಬಾಧೆಗೊಳಗಾಗುತ್ತವೆ. ಹಾಗಾಗಿ ಚೆನ್ನಾಗಿ ಗಾಳಿ ಬಿಸಿಲು ಬರುವಂತೆ ನೋಡಿಕೊಳ್ಳಬೇಕು.

**ಔಷಧೀಯ ಉಪಯೋಗಗಳು-** ಆವಕಾಡೋ ಹಣ್ಣಿನಲ್ಲಿ ಒಳ್ಳೆಯ ಕೊಬ್ಬು, ನಾರು, ಜೀವಸತ್ವಗಳು, ಖನಿಜಗಳು, ಆಂಟಿ ಆಕ್ಸಿಡೆಂಟ್, ಮತ್ತು ಫೈಟೊಸ್ಟೆರಾಲ್ ಗಳು ಇವೆ. ಇದರಲ್ಲಿರುವ ಏಕಪರ್ಯಾಪ್ತ ತೈಲದಿಂದಾಗಿ ಆರೋಗ್ಯ ವೃದ್ಧಿಸಿ, ಜೀರ್ಣಕ್ರಿಯೆ ಸುಧಾರಿಸುವುದು, ಯಕೃತ್ತಿನ ಆರೋಗ್ಯ ವೃದ್ಧಿಸುವುದು.

ಕೊಲೆಸ್ಟರಾಲ್‌ನಿಯಂತ್ರಿಸಿ ರಕ್ತದೊತ್ತಡವನ್ನು ಹದ್ದುಬಸ್ತಿನಲ್ಲಿಡುತ್ತದೆ. ಹೃದಯ ಸಂಬಂಧಿ ಸಮಸ್ಯೆಗಳನ್ನು ಮುಖ್ಯವಾಗಿ, ಹೃದಯಾಘಾತದ ಸಮಸ್ಯೆಯನ್ನು ಕಡಿಮೆ ಮಾಡುತ್ತದೆ. ಮುಖದ ಕಾಂತಿವರ್ಧಕ ಕ್ರೀಮ್‌ನಂತೆ ಬಳಸಬಹುದು. ವೃದ್ಧಾಪ್ಯದ ಲಕ್ಷಣಗಳನ್ನು ದೂರವಿಡಬಹುದು.ಮಧುಮೇಹ ನಿಯಂತ್ರಣಕ್ಕೆ ಇದು ಸಹಕಾರಿ. ಮೂಳೆಗಳಿಗೆ ಬಲ ನೀಡುವುದು. ಅದರ ಖನಿಜ ಸಾಂದ್ರತೆ ಹೆಚ್ಚಿಸುವುದು. ಕಣ್ಣಿನ ಆರೋಗ್ಯವು ಸುಧಾರಿಸುವುದು; ಶರೀರದ ತೂಕ ಇಳಿಸಲು ನೆರವಾಗುವುದು. ಗರ್ಭಿಣಿಯರಲ್ಲಿ ವಿಟಮಿನ್ ಕೆ ಕೊರತೆ ನೀಗಿಸುತ್ತದೆ.

ಆವಕಾಡೊ ಹಣ್ಣಿನಲ್ಲಿ ಇರುವಂತಹ ಉನ್ನತ ಮಟ್ಟದ ಫಾಲಟೆ ಅಂಶವು ಖಿನ್ನತೆಯನ್ನು ದೂರವಿರಿಸುತ್ತದೆ. ಅಪಾಯ ತಗ್ಗಿಸುತ್ತದೆ.

ಆವಕಾಡೊಗಳನ್ನು ಹಾಗೆಯೇ ತಿನ್ನಬಹುದು, ಈರುಳ್ಳಿಯ ಜೊತೆ ಮಿಶ್ರಮಾಡಿ ಒಗ್ಗರಣೆ ಹಾಕಿ ಕೋಸಂಬರಿಯಂತೆ ಸೇವಿಸಬಹುದು. ಮಿಲ್ಕ್‌ಶೇಕ್ಸ್, ಐಸ್‌ಕ್ರೀಮ್ ಮತ್ತು ಇತರ ಸಿಹಿತಿಂಡಿಗಳಲ್ಲಿ ಬಳಸಬಹುದು. ಅಥವಾ ಹಣ್ಣಿನ ಮತ್ತು ತರಕಾರಿಗಳ ಸಲಾಡ್‌ಗಳಲ್ಲಿ ಬಳಸಬಹುದು.

**ಎಚ್ಚರಿಕೆ-** ಬೆಕ್ಕು, ನಾಯಿ, ಮುಂತಾದ ಸಾಕುಪ್ರಾಣಿಗಳು, ಇಲಿ, ಪಕ್ಷಿ, ಮೀನು ಮತ್ತು ಕುದುರೆ ಮೊದಲಾದ ಪ್ರಾಣಿಗಳು ಆವಕಾಡೊ ಎಲೆ, ತೊಗಟೆ, ಸಿಪ್ಪೆ ,ಹಣ್ಣು ಅಥವಾ ಬೀಜಗಳನ್ನು ತಿಂದರೆ ಅವು ತೀವ್ರ ಅನಾರೋಗ್ಯಕ್ಕೆ ತುತ್ತಾಗುತ್ತವೆ; ಸಾವನ್ನಪ್ಪುವ ಸಾಧ್ಯತೆಯೂ ಇದೆ. ಆವಕಾಡೊ ಹಣ್ಣು ಕೆಲವು ಪಕ್ಷಿಗಳ ಪಾಲಿಗೆ ವಿಷಪೂರಿತವಾಗಿದೆ.



ಛಾಯಾ ಓಕ್ ಬಾಪಟ್

ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Madhumathi Kumbaluru**
Inputs: **Poornaprajna / Srikanth K / Veena Vittal**
Photographs: **Venkatesh Murthy / Gopal TS / Chakrapani Kengeri / Internet Sources**
Acknowledgements: **Raghavendra Prasad / Krishna Sampagaonkar / Chaya Bapat**
Sketch: **Rashmi Killedar** Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ವ್ಯಕ್ತಿ ವಿಶೇಷ ಮಾಲಿಕೆ ಬಯಲಲ್ಲಿ ಬಯಲಾದ ಜ್ಞಾನಯೋಗಿ ಸಿದ್ದೇಶ್ವರ ಸ್ವಾಮೀಜಿ

**ರಸವಂತಿ ಚ ಧಾನ್ಯಾನಿ ಗುಣವಂತಿ ಫಲಾನಿ ಚ|**

**ಗಂಧವಂತಿ ಚ ಮಾಲ್ಯಾನಿ ಶುಭಶಬ್ದಾ ಚ ಭಾರತೀ||**

**ರಸಾಃ ಸ್ಪರ್ಶಾಶ್ಚ ಗಂಧಾಶ್ಚ ಶಬ್ದಾಶ್ಚಾಪಿ ಗುಣಾನ್ವಿತಾಃ|**

**ದೃಶ್ಯಾನಿ ಚ ಪ್ರಸನ್ನಾನಿ ಯತ್ರ ರಾಜಾ ಯುಧಿಷ್ಠಿರಃ||**

"ಧರ್ಮರಾಯನಿರುವಲ್ಲಿ ಧಾನ್ಯಗಳು ರಸದಿಂದಲೂ, ಫಲಗಳು ಗುಣಗಳಿಂದಲೂ, ಮಾಲೆಗಳು ಗಂಧದಿಂದಲೂ, ಮಾತುಗಳು ಶುಭ ಶಬ್ದಗಳಿಂದಲೂ ಕೂಡಿರುತ್ತವೆ. ರಸ, ಸ್ಪರ್ಶ, ಗಂಧ, ಶಬ್ದಗಳು ಗುಣಾನ್ವಿತವಾಗಿಯೂ ದೃಶ್ಯಗಳು ಪ್ರಸನ್ನವಾಗಿಯೂ ಇರುತ್ತವೆ."- ಮಹಾಭಾರತದ ವಿರಾಟ ಪರ್ವದಲ್ಲಿ ಬರುವ ಈ ವರ್ಣನೆ ಅತಿಶಯೋಕ್ತಿಯಿರಬಹುದೇ ಎನ್ನಿಸಬಹುದು. ಆದರೆ, ಇದು ಇಂದಿಗೂ ನಿಜ ಎಂಬುದನ್ನು ನೀವು ವಿಜಯಪುರದ ಜ್ಞಾನಯೋಗಾಶ್ರಮದಲ್ಲಿ ನೋಡಬಹುದು. ಬರಡು ಬಿಜಾಪುರದ ಬಿಸಿಲಿಗೆ ಬಸವಳಿದು ಆಶ್ರಮದ ಒಳಗೆ ಕಾಲಿಡುತ್ತಿದ್ದಂತೆ ಹಚ್ಚ ಹಸಿರು, ತಣ್ಣನೆಯ ಗಾಳಿ, ಮನಸ್ಸಿಗೇನೋ ಅನಿರ್ವಚನೀಯ ಆನಂದ. ಅದು ಸ್ವರ್ಗವಲ್ಲ, ಯಾವುದಕ್ಕೂ ಕೊರೆಯಿರದ ವೈಕುಂಠ! ಇದೇ ಗುರು ಸಿದ್ಧೇಶ್ವರರ ನೆಲೆ, ಜ್ಞಾನಯೋಗಾಶ್ರಮ.

ಹಾಗೆಂದು ಸಿದ್ದೇಶ್ವರರು ಇಲ್ಲೇ ನೆಲೆ ನಿಂತವರಲ್ಲ; ಪರಿವ್ರಾಜಕರಂತೆ ಪ್ರಪಂಚ ಸುತ್ತಿದರು, ಜ್ಞಾನದ ಭಂಡಾರವನ್ನೇ ಹಂಚಿದರು. ಅವರ ಜೀವನ ಸರಳ, ಮಾತು ಸರಳ. ಅದರ ಸಂಕೇತವೆಂಬಂತೆ ಬಿಳಿ ಪೋಷಾಕು. ತನಗಾಗಿ ಏನನ್ನೂ ಕೇಳುವುದಿಲ್ಲ, ತಾನು ಏನನ್ನೂ ಉಳಿಸಿಕೊಳ್ಳುವುದಿಲ್ಲ ಎಂಬ ವೀರವ್ರತದ ಸಂಕೇತವಾಗಿ ಜೇಬುಗಳೇ ಇಲ್ಲದ ಅಂಗಿ! ಅವರು ಆಡುವ ಏಳೆಂಟು ನಿಮಿಷಗಳ ಮಾತುಗಳನ್ನು ಆಲಿಸಲು ಮೂವತ್ತರಿಂದ ಐವತ್ತು ಸಾವಿರ ಜನರು ಯಾವುದೇ ಚಿತಾವಣೆಗೆ ಒಳಗಾಗದೆ ನೆರೆಯುತ್ತಿದ್ದರೆಂಬುದನ್ನು ತಿಳಿದರೆ ಆಶ್ಚರ್ಯವಾಗುತ್ತದೆ. ಅವರು ಪ್ರಚಾರದಿಂದ ಸದಾ ದೂರ. ಗೌರವ ಡಾಕ್ಟರೇಟ್ ನಿರಾಕರಿಸಿದರು, ಪದ್ಮಶ್ರೀ ಪ್ರಶಸ್ತಿ ನಿರಾಕರಿಸಿದರು. ಮಾನ ಸನ್ಮಾನಗಳಿಂದ ದೂರವೇ ಉಳಿದರು. ತನಗಾಗಿ ಏನೂ ಬೇಡದವರು, ಅಗತ್ಯಕ್ಕಿಂತ ಹೆಚ್ಚಿನದನ್ನು ಬೇಡ ಎಂದವರು. "ಸಮತ್ವಂ ಯೋಗ ಉಚ್ಯತೇ" ಎಂಬ ಗೀತೆಯ ವಾಕ್ಯ ಇವರಿಗಾಗಿಯೇ ಹೇಳಿದಂತಿದೆ.

ಪೂರ್ವಾಶ್ರಮದ ಹೆಸರು, ಸಿದ್ದಗೊಂಡ ಯೋಗೆಪ್ಪ ಬಿರಾದಾರ, ಎಂಥ ಅನ್ವರ್ಥ ನಾಮ! ಆಧ್ಯಾತ್ಮಪಥದಲ್ಲಿ ತಾನೂ ಮುನ್ನಡೆದು ಇತರರನ್ನೂ ಮುನ್ನಡೆಸಲು ಸಿದ್ದಗೊಂಡ ಯೋಗೆಪ್ಪ! ಜನಿಸಿದ್ದು ವಿಜಯಪುರ ಜಿಲ್ಲೆಯ ತಿಕೋಟಾ ತಾಲೂಕಿನ ಬಿಜ್ಜರಗಿಯಲ್ಲಿ, ದಿನಾಂಕ 24/10/1941ರಂದು. ತಂದೆ ಓಗೆಪ್ಪ ಗೌಡ ಬಿರಾದಾರ್, ತಾಯಿ ಸಂಗವ್ವ. ಬಿಜ್ಜರಗಿ, ಚಡಚಣ, ವಿಜಯಪುರಗಳಲ್ಲಿ ಪ್ರಾರಂಭಿಕ ವಿದ್ಯಾಭ್ಯಾಸ, ಕಾಲೇಜು ವಿದ್ಯಾಭ್ಯಾಸಗಳನ್ನು ಮುಗಿಸಿ ಕೊಲ್ಲಾಪುರದ ಶಿವಾಜಿ ವಿವಿಯಲ್ಲಿ ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು.

1953ರಲ್ಲಿಯೇ ವಿಜಯಪುರದ ಮಲ್ಲಿಕಾರ್ಜುನ ಶ್ರೀಗಳ ಪ್ರಭಾವಕ್ಕೆ ಒಳಗಾದರು. ಬಿಜ್ಜರಗಿಯ ಹೊರವಲಯದ ಗುಡ್ಡದ ಮೇಲೆ ಆಗಾಗ ಧ್ಯಾನ ನಿರತರಾಗುತ್ತಿದ್ದರು. ಒಮ್ಮೆ ಸನ್ಯಾಸಿ ಮಠದ ಈಶ್ವರನ ಗುಡಿಯಲ್ಲಿ ಮೂರು ದಿನ ಧ್ಯಾನನಿರತರಾಗಿದ್ದ ವಿಚಾರ ಮಲ್ಲಿಕಾರ್ಜುನ ಶ್ರೀಗಳಿಗೆ ತಿಳಿಯಿತು. ಶ್ರೀಗಳು ಸಿದ್ದೇಶ್ವರರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡರು, ಅಲ್ಲಿಂದ ಮುಂದೆ, ತಾನು, ತನ್ನದು, ತಮ್ಮವರು ಎಂದು ತಮ್ಮ ಊರಿನ ಕಡೆ ಮುಖ ಮಾಡಲಿಲ್ಲ. ಗದುಗಿನ ಶಿವಾನಂದ ಶ್ರೀಗಳ ಪರಂಪರೆಯಲ್ಲಿ ಬಂದ ವಿಜಯಪುರದ ಜ್ಞಾನಯೋಗಾಶ್ರಮವು ಗುರುಗಳಾದ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಕಾಲದಲ್ಲಿ ಅತ್ಯಂತ ಪ್ರವರ್ಧಮಾನಕ್ಕೆ ಬಂದಿತು. ಅವರ ನಂತರ ಜ್ಞಾನಯೋಗಾಶ್ರಮವನ್ನು ಜ್ಞಾನದಾಸೋಹದ ತಾಣವಾಗಿ ಜನಮಾನಸದಲ್ಲಿ ನೆಲೆ ನಿಲ್ಲಿಸಿದವರು, ಸಿದ್ದೇಶ್ವರರು.

ತಮ್ಮ ಗುರುಗಳು ನೀಡುತ್ತಿದ್ದ ಪ್ರವಚನಗಳ ಸಾರವನ್ನು ಸಂಗ್ರಹಿಸಿ "ಸಿದ್ಧಾಂತ ಶಿಖಾಮಣಿ" ಎಂಬ ಗ್ರಂಥವನ್ನು ರಚಿಸಿ ಗುರುಗಳ ಹೆಸರಿನಲ್ಲಿಯೇ ಪ್ರಕಟಿಸಿದಾಗ ಇವರ ವಯಸ್ಸು ಕೇವಲ ಹತ್ತೊಂಭತ್ತು! ಮುಂದೆ ಭಗವದ್ಗೀತೆಯನ್ನು ಸರಳಗನ್ನಡದಲ್ಲಿ ಅನುವಾದಿಸಿದರು. ಗೀತೆ, ಉಪನಿಷತ್ತುಗಳು, ಪತಂಜಲಿಯ ಯೋಗಸೂತ್ರಗಳು, ಅಕ್ಕ, ಅಲ್ಲಮ, ಬಸವಣ್ಣನವರ ವಚನಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದ ಅವರು ಆ ಎಲ್ಲ ತತ್ತ್ವಗಳನ್ನು ತಮ್ಮ ಪ್ರವಚನಗಳಲ್ಲಿ ಅತ್ಯಂತ ಸರಳವಾಗಿ, ಲೌಕಿಕ ಉದಾಹರಣೆಗಳ ಮೂಲಕ ಸಾಮಾನ್ಯರಿಗೂ ಅರ್ಥವಾಗುವಂತೆ ವಿವರಿಸುತ್ತಿದ್ದರು.



ಕನ್ನಡ, ಹಿಂದಿ, ಮರಾಠಿ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಾವೀಣ್ಯ ಹೊಂದಿದ್ದ ಸಿದ್ದೇಶ್ವರರು ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕಗಳಿಗೆ ಸೀಮಿತಗೊಳ್ಳದೆ ದೇಶದ ಎಲ್ಲೆಗಳನ್ನೂ ದಾಟಿ ವಿಶ್ವಾದ್ಯಂತ ಜಿಜ್ಞಾಸುಗಳಿಗೆ ಭಾರತೀಯ ಆಧ್ಯಾತ್ಮದ ಸರಳತೆಯ ಪರಿಚಯ ಮಾಡಿಕೊಟ್ಟರು. ಪ್ರವಚನಗಳು, ಅಂಕಣ ಬರಹಗಳ ಮೂಲಕ ಜನರಿಗೆ ಹತ್ತಿರವಾದ ಸ್ವಾಮೀಜಿ, ತಮ್ಮದೇ ವಾಹಿನಿ ಇಲ್ಲದಿದ್ದರೂ ಯೂಟ್ಯೂಬ್‌ನಲ್ಲಿ ಅತ್ಯಧಿಕ ವೀಕ್ಷಣೆ ಪಡೆಯುತ್ತಿರುವ ಸಂತರಾಗಿದ್ದಾರೆ.

ಅವರು ನೆಲದ ಋಣವನ್ನು ಬುದ್ಧಿಪೂರ್ವಕವಾಗಿ ತೊರೆದಿದ್ದರೂ ಕಾಯಕವನ್ನು ಕೈಬಿಡಲಿಲ್ಲ. ನೇಗಿಲಯೋಗಿಗಳಿಗೆ ಒತ್ತಾಸೆ ನೀಡಿ ಕೃಷಿಯನ್ನು ಕೈಬಿಡದಂತೆ ಮತ್ತು ತಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಕೃಷಿಯಲ್ಲಿ ಆಸಕ್ತಿ ಮೂಡಿಸುವಂತೆ ಬೋಧಿಸಿದರು. ದಶಕಗಳ ಹಿಂದೆಯೇ ಬಾಗಲಕೋಟೆ, ತೇರದಾಳ, ರಬಕವಿ, ಬನಹಟ್ಟಿ ಮುಂತಾದ ಕಡೆ ಪ್ರವಚನ ನೀಡುವಾಗ ಸಾವಯವ ಕೃಷಿಯ ಮಹತ್ವವನ್ನು ಜನರಿಗೆ ವಿವರಿಸಿ, ರಾಸಾಯನಿಕ ಗೊಬ್ಬರಗಳು ಮಾನವನ ಬದುಕಿನಲ್ಲಿ ರೋಗರುಜಿನಗಳಿಗೆ ದಾರಿ ಮಾಡಿಕೊಡುತ್ತವೆ ಎಂಬುದಾಗಿ ಪ್ರಚಾರ ಮಾಡಿದ್ದರು. ವಿಷಮುಕ್ತ ಬೆಳೆಗಳತ್ತ ರೈತರು ತಮ್ಮ ಚಿತ್ತ ಹರಿಸಬೇಕು, ಇದರಿಂದ ಆರೋಗ್ಯವಂತ ಸಮಾಜಕ್ಕೆ ರೈತರು ಕೊಡುಗೆ ನೀಡಬೇಕು ಎಂದು ಕರೆ ನೀಡುತ್ತಿದ್ದರು. ಭಗವಂತನ ಸೃಷ್ಟಿಯಾದ ಮಾನವ ಜೀವಕೋಟಿಗೆ ಅನ್ನ ನೀಡುವ ರೈತನನ್ನು ಎರಡನೇ ದೇವರು ಎಂದು ಕರೆದಿದ್ದರು.

ಅವರ ಪ್ರವಚನಗಳಲ್ಲಿ ಜಗತ್ತಿನ ಎಲ್ಲ ಧರ್ಮಗಳ, ದರ್ಶನಗಳ, ಆದರ್ಶಗಳ ಸಾರ ಅಡಗಿರುತ್ತದೆ. ಏರಿಳಿತಗಳಿಲ್ಲದ ಪ್ರಶಾಂತ ಧ್ವನಿ, ಕಪಟವಿಲ್ಲದ, ಕುಹಕವಿಲ್ಲದ, ನಿಂದನೆಗಳಿಲ್ಲದ ಮಾತುಗಳು. ಅವರು ಪಾದಪೂಜೆಯನ್ನು ನಿರಾಕರಿಸಿದರು. ಸಮಾಧಿಯನ್ನು ನಿರ್ಮಿಸಬಾರದು ಎಂದು ತಾಕೀತು ಮಾಡಿದರು. ಮರಣದ ನಂತರ ಯಾವುದೇ ವಿಧಿವಿಧಾನಗಳಿಲ್ಲದೆ ತಮ್ಮ ಶವವನ್ನು ಅಗ್ನಿಗರ್ಪಿಸಿ ಚಿತಾಭಸ್ಮವನ್ನು ನೀರಿನಲ್ಲಿ ವಿಸರ್ಜಿಸುವಂತೆ ಅಂತಿಮ ಅಭಿವಂದನ ಪತ್ರದಲ್ಲಿ ಒಕ್ಕಣಿಸಿದ್ದರು.

ತಮ್ಮ ದೇಹ ಸಹಕರಿಸುತ್ತಿಲ್ಲವೆನ್ನಿಸಿದಾಗ ಚಿಕಿತ್ಸೆಯನ್ನು ನಿರಾಕರಿಸಿದರು. ಜೀವಿತದ ಕೊನೆಯ ಇಪ್ಪತ್ತು ದಿನ ಯಾವುದೇ ಆಹಾರವನ್ನು ಸೇವಿಸಲಿಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿಯವರೂ ಸೇರಿದಂತೆ ನಾಡಿನ ಗಣ್ಯರು ಆಹಾರ ಸೇವಿಸುವಂತೆ, ಚಿಕಿತ್ಸೆಗೆ ಒಡ್ಡಿಕೊಳ್ಳುವಂತೆ ವಿನಂತಿಸಿದರೂ ವಿನಯದಿಂದಲೇ ನಿರಾಕರಿಸಿದರು. ಪ್ರಾಣತ್ಯಾಗಕ್ಕೆ ಪರ್ವಕಾಲವನ್ನು ಕಾದಿದ್ದವರಂತೆ 02/01/2022 ರಂದು - ಅಂದು ವೈಕುಂಠ ಏಕಾದಶಿ - ಬಯಲಲ್ಲಿ ಬಯಲಾಗಿ ಹೋದರು. "ಸತ್ಯವೂ ಇಲ್ಲ, ಅಸತ್ಯವೂ ಇಲ್ಲ, ಸಹಜವೂ ಇಲ್ಲ, ಅಸಹಜವೂ ಇಲ್ಲ, ನಾನೂ ಇಲ್ಲ, ನೀನೂ ಇಲ್ಲ, ಇಲ್ಲ ಇಲ್ಲ ಎಂಬುದು ತಾನಿಲ್ಲ, ಗುಹೇಶ್ವರನೆಂಬುದು ತಾ ಬಯಲು" ಎಂಬ ಅಲ್ಲಮನ ವಾಣಿ ತಮ್ಮ ಅಂತಿಮ ನೆನಹು ಎಂದು ಅಂತಿಮ ಅಭಿವಂದನ ಪತ್ರದಲ್ಲಿ ಬರೆದಿದ್ದ ಸಿದ್ದೇಶ್ವರರು ಅದರಂತೆ ಬದುಕಿದರು, ನಿರ್ಗಮಿಸಿದರು.

ನಾವು ಸಂತೋಷವನ್ನು ಹಾಗೂ ದೇವರನ್ನು ಹುಡುಕಲು ಹೋಗುತ್ತೇವೆ. ದೇವರನ್ನು ಹುಡುಕಬೇಡಿ, ನೋಡಿ. ಸೂರ್ಯೋದಯದಲ್ಲಿ, ಸೂರ್ಯಾಸ್ತದಲ್ಲಿ, ಹೂವಿನಲ್ಲಿ, ಹಸುರಿನಲ್ಲಿ, ಹರಿಯುವ ನೀರಿನಲ್ಲಿ, ಮಗುವಿನ ಮುಗ್ಧ ನಗೆಯಲ್ಲಿ ಅವನು ಇಲ್ಲೇ ಇದ್ದಾನೆ, ನೋಡಿ, ಅಲ್ಲಿ ಸೌಂದರ್ಯವಿದೆ, ಸಂತೋಷವಿದೆ, ಬೇರೆಲ್ಲೋ ಹುಡುಕಲು ಹೋಗಬೇಡಿ ಎಂಬುದು ಅವರ ಬೋಧನೆಯ ತಿರುಳು.

ರೈತರೊಂದಿಗೆ ರೈತನಾಗಿ, ಭಕ್ತರೊಂದಿಗೆ ಭಕ್ತನಾಗಿ, ಮಕ್ಕಳೊಂದಿಗೆ ಮಕ್ಕಳಾಗಿ, ಜ್ಞಾನಿಗಳೊಂದಿಗೆ ಜ್ಞಾನಿಯಾಗಿ, ಎಲ್ಲರೊಂದಿಗೆ ಅವರವರ ಭಾವಕ್ಕೆ ತಕ್ಕಂತೆ ಸ್ಪಂದಿಸುತ್ತಿದ್ದ ಸಿದ್ದೇಶ್ವರರು ನಿಜಾರ್ಥದಲ್ಲಿ ವಿಶ್ವಮಾನವರು, ವಿಶ್ವಮಾನ್ಯರು, ವಿಶ್ವಸಂತರು. ಜೀವನದಲ್ಲಿ ಒಮ್ಮೆಯಾದರೂ ವಿಜಯಪುರಕ್ಕೆ ಭೇಟಿ ನೀಡಿ, ಜ್ಞಾನಯೋಗಾಶ್ರಮದಲ್ಲಿ ಕ್ಷಣಕಾಲ ಕಳೆಯಿರಿ, ಯಾವುದೇ ಪ್ರಯತ್ನಗಳಿಲ್ಲದೆಯೂ ನೆಮ್ಮದಿ ನಿಮ್ಮದಾಗುತ್ತದೆ.

-ಕೆ. ಜನಾರ್ದನ ತುಂಗ

(ಪುಟ 3 ರಿಂದ)

# ಪರಂಪರೆಯ ಪ್ರತೀಕ – ಅನಂತ ಸೇವಾ ಉತ್ಸವ

ಪ್ರಸಿದ್ಧ ಯಕ್ಷಗಾನ ಕಲಾವಿದ ಶ್ರೀ ಕೆರೆಮನೆ ಶಿವಾನಂದ ಹೆಗಡೆ ಮತ್ತು ಸಂಗಡಿಗರು ಪ್ರಸ್ತುತ ಪಡಿಸಿದರು. ಮಧ್ಯರಾತ್ರಿ 12 ಗಂಟೆಗೆ ಸರಿಯಾಗಿ ಪ್ರಕೃತಿ, ಪರಿಸರ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಕೆಲಸಮಾಡುವ ಸಂಕಲ್ಪವನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಬೋಧಿಸಿದರು. ಸಾಮೂಹಿಕ ವಂದೇ ಮಾತರಂ ಗಾಯನದ ಮೂಲಕ ಹೊಸ ವರ್ಷಕ್ಕೆ ಸ್ವಾಗತ ಕೋರಲಾಯಿತು. ಇದರೊಂದಿಗೆ ಪ್ರಥಮ ದಿನದ ಕಾರ್ಯಕ್ರಮವೂ ಮುಕ್ತಾಯವಾಯಿತು.

ಅಕ್ಕಲಕೋಟೆ ಸಮರ್ಥ ಮಹಾರಾಜರ ಪಾದುಕೆಗಳು ಅದಮ್ಯಚೇತನ ಸಂಸ್ಥೆಗೆ ಆಗಮಿಸಿದ ಶುಭ ಶಕುನದೊಂದಿಗೆ ಹೊಸ ವರ್ಷ ಪ್ರಾರಂಭವಾಯಿತು. ದಿವ್ಯ ಪಾದುಕೆಗಳಿಗೆ ಪೂಜೆ ಮಾಡಿ, ವಂದಿಸಿ ಎಲ್ಲ ಕಾರ್ಯಕರ್ತರೂ ಪುನೀತರಾದರು. ನಂತರ ಶಿವಪುರಿಯ ವಿಶ್ವ ಫೌಂಡೇಶನ್ ಅಧ್ಯಕ್ಷರೂ, ಪ್ರಸಿದ್ಧ ಅಧ್ಯಾತ್ಮ ಗುರುಗಳೂ ಆದ ಡಾ. ಪುರುಷೋತ್ತಮ್ ರಾಜಿಮ್‌ವಾಲೆ ಉದ್ಬೋಧಕ ಉಪನ್ಯಾಸ ನೀಡಿದರು.

ಮಧ್ಯಾಹ್ನ ಮೂರು ಗಂಟೆಯ ವರೆಗೆ ಅನೇಕ ಸ್ಪರ್ಧೆಗಳು ಮತ್ತು ಶಾಲಾ ಮಕ್ಕಳಿಂದ ಮನರಂಜನಾ ಕಾರ್ಯಕ್ರಮಗಳು ನಡೆದವು. ಬಾಲಕಿಯೊಬ್ಬಳು ನೀಡಿದ ಯೋಗನೃತ್ಯವು ಸಭಾಸದರನ್ನು ಬೆರಗುಗೊಳಿಸಿತು. ಮೂರು ಗಂಟೆಗೆ ಅನಂತಕುಮಾರ್ ಪ್ರತಿಷ್ಠಾನದ ಎ-ಚಾಟ್ ಮಾಸಿಕ ಕಾರ್ಯಕ್ರಮದ ಅಡಿಯಲ್ಲಿ ಎರಡು ವರ್ಷಕ್ಕೇ ವಿಶ್ವದಾಖಲೆ ನಿರ್ಮಿಸಿರುವ ಪುಟ್ಟ ಬಾಲಕಿ, ಸ್ವರಾ ಅರ್ವಾಳಿಂದ ಪ್ರತಿಭಾ ಪ್ರದರ್ಶನ ಮತ್ತು ನೃತ್ಯಪಟು ಕುಮಾರಿ ಸುಷ್ಮಾ ಸಿ ಎಲ್ ಅವರಿಂದ ಮನಮೋಹಕ ನೃತ್ಯಪ್ರದರ್ಶನ.

ನಾಲ್ಕು ಗಂಟೆಗೆ ಡಾ. ಪದ್ಮಿನಿ ಓಕ್ ಅವರಿಂದ ಮೈನವಿರೇಳಿಸುವ ದೇಶಭಕ್ತಿಗೀತೆಗಳ ಗಾಯನ. ಕೊನೆಯಲ್ಲಿ ರಾಮನಾಮ ಸ್ಮರಣೆಯ ಜೊತೆಗೆ ರಾಮಜನ್ಮಭೂಮಿ ನ್ಯಾಸದ ಸದಸ್ಯರೂ, ಪೇಜಾವರ ಮಠಾಧೀಶರೂ ಆದ ಶ್ರೀ ಶ್ರೀ ವಿಶ್ವಪ್ರಸನ್ನ ಸ್ವಾಮೀಜಿಯವರಿಗೆ ಸ್ವಾಗತ. ಶ್ರೀಗಳ ಸನ್ನಿಧಿಯಲ್ಲಿ ಗೀತಸಮರ್ಪಣೆ ಕಾರ್ಯಕ್ರಮ, ನೂರಾರು ಕಂಠಗಳಿಂದ ಅಖಂಡ ವಂದೇ ಮಾತರಂ ಗಾಯನ, ಶ್ರೀಗಳ ಅಮೃತಹಸ್ತದಿಂದ ಅದಮ್ಯ ಚೇತನದ ದಿನಚರಿಯ ಬಿಡುಗಡೆ, ಕೊನೆಯಲ್ಲಿ ಶ್ರೀಗಳಿಂದ ಅನುಗ್ರಹ ಭಾಷಣ, ಇವೆಲ್ಲವೂ ಎರಡು ದಿನಗಳ ಉತ್ಸವಕ್ಕೆ ಕಳಶಪ್ರಾಯವಾಗಿದ್ದವು.

ದಿನದ ಕೊನೆಗೆ, ಪ್ರಶಸ್ತಿ ವಿಜೇತರಿಗೆ ಬಹುಮಾನ ವಿತರಣೆ, ವಿವಿಧ ಸ್ಪರ್ಧೆಗಳ ತೀರ್ಪುಗಾರರಿಗೆ ಸನ್ಮಾನಗಳ ಮೂಲಕ ಎರಡು ದಿನಗಳ ಸಂಭ್ರಮ ತೆರೆಕಂಡಿತು.

ಉತ್ಸವದಲ್ಲಿ ವಿವಿಧ ಸ್ಪರ್ಧೆಗಳು, ಪ್ರದರ್ಶಿನಿಗಳು, ಸಸ್ಯಾಗ್ರಹ, ಮನರಂಜನಾ ಕಾರ್ಯಕ್ರಮಗಳು, ಬೀದಿ ನಾಟಕಗಳು, ವಂದೇ ಮಾತರಂ ಗಾಯನ ಮುಂತಾದ ಚಟುವಟಿಕೆಗಳ ಜೊತೆಗೆ ಅನೇಕ ಪರಿಸರ ಸ್ನೇಹಿ ಉತ್ಪನ್ನಗಳ ಮಾರಾಟ ಮಳಿಗೆಗಳೂ ಇದ್ದವು.












# ಅದಮ್ಯಚೇತನ ತಿಂಗಳ ವರದಿ

(15 ಡಿಸೆಂಬರ್ 2022 ರಿಂದ 15 ಜನವರಿ 2022)




**ಅದಮ್ಯ ಚೇತನಕ್ಕೆ ಗಣ್ಯರ ಭೇಟಿ-** ಅನಂತಸೇವಾ ಉತ್ಸವಕ್ಕೆ ಆಗಮಿಸಿದ್ದ ಗಣ್ಯ ಅತಿಥಿಗಳೆಲ್ಲರೂ ಅದಮ್ಯಚೇತನಕ್ಕೆ ಬಂದು ಅನ್ನಪೂರ್ಣ ಅಡುಗೆಮನೆಯ ವ್ಯವಸ್ಥೆಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಪೇಜಾವರ ಮಠಾಧೀಶರಾದ ವಿಶ್ವಪ್ರಸನ್ನ ತೀರ್ಥರು, ಬೇಲಿಮಠದ ಶ್ರೀ ಶಿವರುದ್ರಸ್ವಾಮಿಯವರು, ಗೋಸಾಯಿಮಠದ ಸ್ವಾಮೀಜಿಯವರು, ಗವಿಗಂಗಾಧರ ದೇಗುಲದ ಪ್ರಧಾನ ಅರ್ಚಕರಾದ ಶ್ರೀ ಮಂಜುನಾಥ ದೀಕ್ಷಿತರು, ಶಿವಪುರಿಯ ಡಾ. ಪುರುಷೋತ್ತಮ್, ಅಂತೆಯೇ ಕೇಂದ್ರ ಗೃಹಸಚಿವ ಶ್ರೀ ಅಮಿತ್ ಷಾ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಟಿ.ರವಿ, ಬಿಜೆಪಿ ರಾಜ್ಯಾಧ್ಯಕ್ಷ ಶ್ರೀ ನಳಿನ್ ಕುಮಾರ್ ಕಟೀಲ್, ಕರ್ನಾಟಕದ ಸಚಿವರಾದ ಶ್ರೀ ಆರಗ ಜ್ಞಾನೇಂದ್ರ, ಶ್ರೀ ಆರ್. ಅಶೋಕ್, ಶ್ರೀ ಸೋಮಶೇಖರ್, ಖ್ಯಾತ ಲೇಖಕ ಪ್ರೊ. ಕೃಷ್ಣೇಗೌಡ, ಮೊದಲಾದ ಗಣ್ಯರು ಅದಮ್ಯಚೇತನಕ್ಕೆ ಭೇಟಿ ನೀಡಿದರು. ಹನುಮಂತನಗರ ಪೊಲೀಸ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಶ್ರೀ ಸಂದೀಪ್, ಕೆ. ಆರ್. ರಸ್ತೆಯಲ್ಲಿರುವ ಉಮಾ ಮಹೇಶ್ವರಿ ದೇವಸ್ಥಾನ ಮಂಡಳಿಯ ಟ್ರಸ್ಟಿಯಾದ ಶ್ರೀಮತಿ ಉಷಾ ಮತ್ತು ಅವರ ಸಹೋದರಿ, ರಾಜ್ಯ ಕೃಷಿ ಇಲಾಖೆಯ ಹೆಚ್ಚುವರಿ ನಿರ್ದೇಶಕರಾದ ಶ್ರೀ ಅನೂಪ್, ಜೆಡಿಎ ಕೃಷಿ ಇಲಾಖೆಯ ಅಧಿಕಾರಿ, ಶ್ರೀ ಲಕ್ಷಣ್ ಎಸ್. ಕೆ., ಕೃಷಿ ಇಲಾಖೆಯ ಉಪ ನಿರ್ದೇಶಕರಾದ ಡಾ. ಕೆ. ನಯೀಮ್ ಪಾಷಾ, ಬೆಂಗಳೂರಿನ ಉತ್ತರ ಕರ್ನಾಟಕ ಸ್ನೇಹ ಲೋಕ (UKSL) ಟ್ರಸ್ಟಿನ ಕಾರ್ಯದರ್ಶಿ ಆದ ಅರುಣ್ ಆರ್. ಯಡ್‌ವಾಡ್, ಗಿರೀಶ್ ಎಲಮಾಹಿ ಹಾಗೂ ಬಿಇಎಲ್ ಇಂಗ್ಲಿಷ್ ಪ್ರಾಥಮಿಕ ಶಾಲೆಯ ಶ್ರೀಮತಿ ಕಾವ್ಯ ಅಮೃತ, ಗಾಯತ್ರಿ, ನಗರದ ಬ್ರಹ್ಮಕುಮಾರಿ ಸಮಾಜದ ಶ್ರೀಮತಿ ಬಿ. ಕೆ. ಉಮಾ, ಶ್ರೀ ಪುಟ್ಟಣ್ಣ, ಶ್ರೀ ರುದ್ರೇಶ್ ಮತ್ತು ಶ್ರೀ ಮಲ್ಲಿಕಾರ್ಜುನ ಮುಂತಾದ ಗಣ್ಯರು ಅದಮ್ಯ ಚೇತನಕ್ಕೆ ಭೇಟಿ ನೀಡಿ, ಶೂನ್ಯತ್ಯಾಜ್ಯ ಅಡುಗೆ ಮನೆಯನ್ನು ವೀಕ್ಷಿಸಿ ಪ್ರಶಂಸೆ ವ್ಯಕ್ತಪಡಿಸಿದರು.

**ಶ್ರದ್ಧೆಯ ಶಿಲ್ಪ-** ಮೈಸೂರು ಎಫ್ ಎಂ ರೇಡಿಯೋದಲ್ಲಿ ಅದಮ್ಯ ಚೇತನ ಪ್ರಸ್ತುತ ಪಡಿಸುತ್ತಿರುವ ಶ್ರದ್ಧೆಯ ಶಿಲ್ಪ ಮಾಲಿಕೆಯಲ್ಲಿ ದೇಗುಲಗಳ ಬಗ್ಗೆ ಅಡಕವಾದ ಮಾಹಿತಿಯನ್ನು ನೀಡಲಾಗುತ್ತಿದೆ. ಅನಂತಪಥ ಪತ್ರಿಕೆಯ ಸಂಪಾದಕರಾದ ಟಿ. ಎಸ್. ಗೋಪಾಲ್ ನಡೆಸಿಕೊಡುವ ಈ ಕಾರ್ಯಕ್ರಮವು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಪ್ರಸಾರವಾಗುತ್ತಿದೆ.

**ಹಸಿರು ಭಾನುವಾರ-** ಪರಿಸರ ರಕ್ಷಣೆಯ ದೃಷ್ಟಿಯಿಂದ ಅದಮ್ಯ ಚೇತನ, ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅನಂತ ಪ್ರೇರಣಾ ಕೇಂದ್ರದ ವತಿಯಿಂದ ಹಸಿರು ಭಾನುವಾರ ಕಾರ್ಯಕ್ರಮವನ್ನು ಆಯೋಜನೆ ಮಾಡಿಕೊಂಡು ಬರಲಾಗುತ್ತಿದೆ. ಅದರಂತೆ 365, 366 ಮತ್ತು 367ನೇ ಹಸಿರು ಭಾನುವಾರಗಳನ್ನು ಕ್ರಮವಾಗಿ ಜೆ. ಪಿ. ನಗರ 5ನೇ ಹಂತ, 20ನೇ ಮುಖ್ಯರಸ್ತೆ, ಗವಿಪುರದ ಅದಮ್ಯ ಚೇತನದ ರಸ್ತೆಯ ಬದಿಗಳಲ್ಲಿ ಹಾಗೂ ಬನಶಂಕರಿ 6ನೇ ಹಂತದ ಹೆಮ್ಮಿಗೆಪುರ ಬಸವ ದೇವಸ್ಥಾನದ ಆವರಣದಲ್ಲಿ ಆಚರಿಸಲಾಯಿತು. ಅದಮ್ಯ ಚೇತನದ ತ್ಯಾಜ್ಯ ಕೊಂಡೊಯ್ದು ಗಿಡಗಳಿಗೆ ನೀರುಣಿಸುವ ಕಾರ್ಯವನ್ನೂ ಕೈಗೆತ್ತಿಕೊಳ್ಳಲಾಯಿತು.

**ಇತರ ಚಟುವಟಿಕೆಗಳು-** ಅದಮ್ಯ ಚೇತನವು ಕಳೆದ ಎರಡು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ನಿತ್ಯ ಅನ್ನದಾನ ಯಶಸ್ವಿಯಾಗಿ ಮುಂದುವರಿದಿದೆ. ಇದಲ್ಲದೆ ಅಗತ್ಯವಿರುವ ಕಾಲೇಜು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ, ಪೌರಕಾರ್ಮಿಕರಿಗೆ ಊಟದ ತಟ್ಟೆ ವಿತರಣೆ, ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ಸಹಯೋಗದಲ್ಲಿ ಅದಮ್ಯ ಚೇತನ ಅಡುಗೆ ಮನೆಯಿಂದ ಪ್ರತಿದಿನ 265 ಶಾಲೆಗಳ ಮಕ್ಕಳಿಗೆ ಬಿಸಿಯೂಟದ ಜೊತೆಗೆ ಚಾಕ್ಲೇಟ್ ಸುವಾಸನೆಯುಳ್ಳ ಪೌಷ್ಠಿಕಾಂಶಯುಕ್ತ ಹಾಲಿನ ವಿತರಣೆ, ಪ್ರತಿ ಮಂಗಳವಾರದ ಶ್ರೀ ಚೇತನ ಸಭೆ, ಪ್ರತಿ ಗುರುವಾರ ಭಗವದ್ಗೀತೆ ಪಠಣ - ಇವೆಲ್ಲ ಕಾರ್ಯಕ್ರಮಗಳೂ ಕ್ರಮಬದ್ಧವಾಗಿ ನಡೆಯುತ್ತಿವೆ.

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )





ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಷಾ ರವರು ಅದಮ್ಯ ಚೇತನಕ್ಕೆ ಭೇಟಿನೀಡಿ ಶೂನ್ಯತ್ಯಾಜ್ಯ ವ್ಯವಸ್ಥೆಯನ್ನು ಪ್ರಶಂಸಿಸಿದರು.



ಅದಮ್ಯ ಚೇತನಕ್ಕೆ ಸಾಲುಮರದ ತಿಮ್ಮಕ್ಕನವರು ಭೇಟಿ ನೀಡಿದ ಸಂದರ್ಭ.



ಅದಮ್ಯಚೇತನಕ್ಕೆ ಆಗಮಿಸಿದ್ದ ಪೇಜಾವರ ಶ್ರೀಗಳು ಅನ್ನಪೂರ್ಣ ಅಡುಗೆಮನೆಯನ್ನು ವೀಕ್ಷಿಸಿದರು.



ಸೇವಾ ಉತ್ಸವದ ಕಾರ್ಯಕ್ರಮಕ್ಕೆ ಆಗಮಿಸಿದ್ದ ಪ್ರೊ. ಕೃಷ್ಣೇಗೌಡರು ಅದಮ್ಯಚೇತನಕ್ಕೆ ಭೇಟಿನೀಡಿದರು.



ಅದಮ್ಯ ಚೇತನಕ್ಕೆ ಆಗಮಿಸಿದ ಅಕ್ಕಲಕೋಟೆ ಸಮರ್ಥ ಮಹಾರಾಜರ ಪಾದುಕೆಗಳನ್ನು ಪೂಜಿಸಲಾಯಿತು.



ಇತ್ತೀಚೆಗೆ ತುಮಕೂರಿನಲ್ಲಿ ನಡೆದ ವಿಪ್ರ ಮಹಿಳಾ ಸಮಾವೇಶದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರರನ್ನು ಸನ್ಮಾನಿಸಲಾಯಿತು.



ನರೇಗಲ್ ಅನ್ನದಾನ ವಿದ್ಯಾಪ್ರಸಾರಕ ಸಮಿತಿ ಪ್ರಾರಂಭಿಸಿರುವ ಕಿತ್ತೂರ ಚೆನ್ನಮ್ಮ ಮಹಿಳಾ ವಸತಿ ನಿಲಯವನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಉದ್ಘಾಟಿಸಿದರು.

## ಅನಂತ ಚಿತ್ರಸಂಪುಟ

ಅನಂತಕುಮಾರರು ನವವರುಷದ ಸ್ವಾಗತಕ್ಕಾಗಿ ಆಯೋಜಿಸುತ್ತಿದ್ದ ಅದಮ್ಯ ಸೇವಾ ಉತ್ಸವದಲ್ಲಿ ರಾಷ್ಟ್ರಪತಿಗಳಿಂದ ಮೊದಲುಗೊಂಡು ಅನೇಕ ಗಣ್ಯರೂ, ಸಾರ್ವಜನಿಕರೂ ಸಂಭ್ರಮದಿಂದ ಪಾಲ್ಗೊಳ್ಳುತ್ತಿದ್ದರು.























